ಸಂಪುಟ : 8 ಸಂಚಿಕೆ : 200 ಪುಟ : 4 ಬೆಲೆ : 3.00 ಬುಧವಾರ ಸೆಪ್ಟಂಬರ್ 13, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 200 Pages : 4 Price : 3.00 Wednesday September 13, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟಂಬರ 13 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 30, 34ರಲ್ಲಿ ಮೂರಶಿಳ್ಳಿನ ವಕಾರ, 46 ಪ್ಲಾಟ್, ಕೊರವರ ಓಣಿ, ಶಿವಾನಂದ ಗಾರ್ಡನ್ ಲೈನ್, ಬಸವೇಶ್ವರ ಸ್ಕೂಲ್ ಹಿಂದಿನ ಭಾಗ, ಮುಂದಿನ ಭಾಗ, ವಾರ್ಡ್ ನಂ. 15,16,17ರಲ್ಲಿ ಶಹಪೂರ ಪೇಟೆ, ಡಿ.ಸಿ.ಮಿಲ್ ರೋಡ್, ಜವಳಗಲ್ಲಿ ಮೀನದ ಮಾರ್ಕೆಟ್, ವಿಜಾಪೂರ ಓಣಿ, ಭಜಂತ್ರಿ ಓಣಿ, ಕಾಡಪ್ಪನವರ ಲೈನ್, ತಡಸದ ಲೈನ್, ಕಟ್ಟಿ ಬಸವೇಶ್ವರ ಲೈನ್, ಗಣೇಶಗುಡಿ ಲೈನ್, ಶಂಕರಲಿಂಗನಗುಡಿ ಲೈನ್, ವೀರಭದ್ರೇಶ್ವರ ಗುಡಿ ಲೈನ್, ಲಕ್ಷ್ಮೀ ಗುಡಿ ಲೈನ್, ನಾಗಪ್ಪನ ಕಟ್ಟಿ ಲೈನ್, ಮಸೂತಿ ಲೈನ್, ಮದ್ಲಿ ಓಣಿ, ವಾರ್ಡ್ ನಂ. 11,12 ರಲ್ಲಿ ಕರಿಯಮ್ಮನಕಲ್ ಇರಾಣಿ ಕಾಲೊನಿ, ಅಬ್ದುಲ್ ಕಲಾಂ ಲೈನ್, ನಾಗಪ್ಪನ ಕಟ್ಟಿ, ಗಣಪತಿ ಕಟ್ಟಿ, ಪಿ.&ಟಿ. ಕ್ವಾರ್ಟರ್ಸ್ ಲೈನ್, ರಾಘವೇಂದ್ರ ಗುಡಿ ಲೈನ್, ಹನಮಂತ ದೇವರಗುಡಿ, 4ನೇ ಕ್ರಾಸ್, ಈಶ್ವರ ಗುಡಿ ಲೈನ್, ವಾರ್ಡ್ ನಂ. 28, 29 ಪಂಚಾಕ್ಷರಿ ನಗರ 3ನೇ ಕ್ರಾಸ್, ರಾಜೀವಗಾಂಧಿನಗರ 2ನೇ ಕ್ರಾಸ್, ವಾರ್ಡ್ ನಂ. 33ರಲ್ಲಿ ನಾವಳ್ಳಿ ಲೈನ್, ಬಸಯ್ಯ ಡಾ॥ ಲೈನ್, ಪಿಡ್ಡಿಯವರ ಲೈನ್, ತಾಜನಗರ ಹುಬ್ಬಳ್ಳಿ ರಸ್ತೆ, ಹಳೆ ಕಚೇರಿ ಕಿಲ್ಲಾ ಓಣಿ, ಸುಣಗಾರ ಓಣಿ, ಹಂಚಿನ ಓಣಿ, ವಾರ್ಡ್ ನಂ. 5ರಲ್ಲಿ ನರಸಾಪೂರ ಆಶ್ರಯ ಕಾಲೋನಿಯ ಕೆಲವು ಭಾಗಗಳು, ನೇಕಾರ ಕಾಲೋನಿಯ ಕೆಲವು ಭಾಗಗಳು, ರಂಗಪ್ಪಜ್ಜನಮಠ 2ನೇ ಬ್ಯಾಚ್, ಭಜಂತ್ರಿ ಓಣಿ, ಅಂಬೇಡ್ಕರ್ ನಗರ, ಕುಲಕರ್ಣಿ ಗಲ್ಲಿ, ಉಳಿದ ಭಾಗಗಳು .

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ ಬೇಟಗೇರಿ ನಗರ ಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಪೂರ್ವ ಸಿದ್ಧತಾ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಸೆಪ್ಟೆಂಬರ್ 15ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಆಚರಿಸುವ ಪ್ರಯುಕ್ತ ಸೆಪ್ಟೆಂಬರ್ 14 ರಂದು ಮಧ್ಯಾಹ್ನ 3 ಗಂಟೆಗೆ ಗದಗ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ಧತಾ ಸಭೆ ಕರೆಯಲಾಗಿದೆ.

ಸಂವಿಧಾನದ ಬಗ್ಗೆ ಅರಿವು ಮೂಡಿಸುವ, ವ್ಯಾಪಕ ಪ್ರಚಾರ ನೀಡಲು ಹಾಗೂ ಸಂವಿಧಾನದ ಪ್ರಾಮುಖ್ಯತೆಯನ್ನು ತಿಳಿಸಲು ಜಿಲ್ಲೆಯ ನೋಂದಾಯಿತ ದಲಿತ ಸಂಘರ್ಷ ಸಮಿತಿಯ ಮುಖಂಡರುಗಳು, ಪರಿಶಿಷ್ಟ ಪಂಗಡ ಸಮಿತಿಯ ಮುಖಂಡರು, ಹಿಂದುಳಿದ ಸಂಘಟನೆಗಳ ಮುಖಂಡರುಗಳು, ಅಲ್ಪಸಂಖ್ಯಾತರ ಸಮಿತಿಯ ಸಂಘಟನೆಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಪೂರ್ವಭಾವಿ ಸಭೆಯಲ್ಲಿ ಹಾಜರಿರಲು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಪ್ರತಿ ಬ್ಲಾಕ್ ಹಂತದ ಸಂಪನ್ಮೂಲ ಕೇಂದ್ರಗಳಿಗೆ ವಿಶೇಷ ಶಿಕ್ಷಣದಲ್ಲಿ ಡಿ.ಇಡಿ ಮತ್ತು ಆರ್.ಸಿ.ಐ ಪ್ರಕಾರ ಪ್ರಾಥಮಿಕ ಹಂತಕ್ಕೆ ತತ್ಸಮಾನ ವಿದ್ಯಾರ್ಹತೆ ಹೊಂದಿರುವ ಮತ್ತು ಪದವಿಯೊಂದಿಗೆ ವಿಶೇಷ ಬಿ.ಇಡಿ ಮತ್ತು ಆರ್.ಸಿ.ಐ ವಿದ್ಯಾರ್ಹತೆ ಹೊಂದಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರಿಂದ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ತಾತ್ಕಾಲಿಕವಾಗಿ ನೇರಗುತ್ತಿಗೆ ಬಿ.ಇ ಆರ್.ಟಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಉಪನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ, ಗದಗ ಜಿಲ್ಲೆ, ಗದಗ ಕಚೇರಿಗೆ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 16 ರಂದು ಬೆಳಿಗ್ಗೆ 10-30ಕ್ಕೆ ಕಚೇರಿಯಲ್ಲಿ ಸಂದರ್ಶನ ತೆಗೆದುಕೊಳ್ಳಲಾಗುವುದು. ಸಂದರ್ಶನ ಸಮಯಕ್ಕೆ ಸರಿಯಾಗಿ ಹಾಜರಾಗಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಸ್ತುತ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಪರಿಶಿಷ್ಟ ವರ್ಗದ ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲು ಸರ್ಕಾರ ನಿರ್ಧರಿಸಿದೆ.

ಅಕ್ಟೋಬರ 28 ರಂದು ನಡೆಯುವ ಮಹರ್ಷಿ ವಾಲ್ಮೀಕಿ ಜಯಂತಿಯಂದು ಪ್ರಶಸ್ತಿಯನ್ನು ನೀಡಲು ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಶಸ್ತಿಗೆ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕಾಗಿದ್ದರಿಂದ ಸಮಾಜ ಸೇವೆ ಕೈಗೊಂಡ ಹಾಗೂ ಪರಿಶಿಷ್ಟ ಪಂಗಡದ ಜನಾಂಗದ ಏಳಿಗೆಗಾಗಿ ಶ್ರಮಿಸಿದ ಬಗ್ಗೆ ಛಾಯಾಚಿತ್ರ ಹಾಗೂ ದಾಖಲೆ ಸಮೇತವಾಗಿ ಅರ್ಜಿಯನ್ನು ಉಪನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ರೂ ನಂ: 107 ಮೊದಲನೆ ಮಹಡಿ ಜಿಲ್ಲಾಡಳಿತ ಭವನ ಹುಬ್ಬಳ್ಳಿ ರೋಡ್ ಗದಗ ಕಚೇರಿಗೆ ಸೆಪ್ಟಂಬರ್ 25 ರೊಳಗಾಗಿ ಖುದ್ದಾಗಿ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಗದಗ ದೂರವಾಣಿ ಸಂಖ್ಯೆ 08372-231828 ಸಂಪರ್ಕಿಸಬಹುದಾಗಿದೆ.

## ಸಂಘ-ಸಂಸ್ಥೆಗಳ ನವೀಕರಣ ಮಾಡಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನೋಂದಣಿಯಾದ ಸಂಘ-ಸಂಸ್ಥೆಗಳು 05 ವರ್ಷಗಳಿಗೂ ಮೇಲ್ಪಟ್ಟು ಫೈಲಿಂಗ್ ಮಾಡಿಕೊಳ್ಳದೆ ಇರುವ ಸಂಘ-ಸಂಸ್ಥೆಗಳನ್ನು ಸದಸ್ಯರ ಹಿತದೃಷ್ಟಿಯಿಂದ ಈ ಕೆಳಕಂಡ ಷರತ್ತಿಗೊಳಪಟ್ಟು ದಿನಾಂಕ 30-06-2024 ರ ಅಂತ್ಯದವರೆಗೆ ಫೈಲಿಂಗ್‌ಗೆ ಅನುಮತಿ ನೀಡಿದೆ.

05 ವರ್ಷಗಳಿಗೆ ಮೇಲ್ಪಟ್ಟು ಫೈಲಿಂಗ್ ಮಾಡಿಕೊಳ್ಳದೆ ಬಾಕಿ ಇರುವ ಸಂಘ-ಸಂಸ್ಥೆಗಳು ಪ್ರತಿ ವರ್ಷಕ್ಕೆ ರೂ.3000/- ಹೆಚ್ಚುವರಿ ದಂಡ ಪಾವತಿಸಿ ಫೈಲಿಂಗ್ ಮಾಡಿಕೊಳ್ಳತಕ್ಕದ್ದು. ಈ ಅವಕಾಶವು ದಿನಾಂಕ 30-06-2024 ರ ಅಂತ್ಯದವರೆಗೆ ಜಾರಿಯಲ್ಲಿರುತ್ತದೆ ಗದಗ ಜಿಲ್ಲೆಯಲ್ಲಿ ನೋಂದಾಯಿತ ಎಲ್ಲ ಸಂಘ-ಸಂಸ್ಥೆಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘ/ ಸಂಸ್ಥೆಗಳ ಜಿಲ್ಲಾ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಗೆ ಇಂದು ಭೂಮಿಪೂಜೆ

# ಶ್ರೀಕ್ಷೇತ್ರವಾಗುವತ್ತ ಮುಕ್ತಿಮಂದಿರ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮಹಾನ್‌ಯೋಗಿ, ಪರಮ ತಪಸ್ವಿ ಲಿಂ.ವೀರಗಂಗಾಧರ ಜಗದ್ಗುರುಗಳ ಸತ್ಯ ಸಂಕಲ್ಪದಂತೆ ಸೆ.13ರಂದು ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಲಿಂಗ ಸ್ಥಾಪನೆಗೆ ಭೂಮಿಪೂಜೆಯು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳ ಆಶೀರ್ವಾದೊಂದಿಗೆ ನೊಣವಿನಕೇರಿ ಕಾಡಸಿದ್ದೇಶ್ವರಮಠ ಡಾ. ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮಿಗಳು ಮತ್ತು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನೆರವೇರಲಿದೆ. ಭೂಮಿಪೂಜಾ ಕಾರ್ಯಕ್ರಮಕ್ಕೆ ನಾಡಿನ ಹರ-ಗುರು-ಚರಮೂರ್ತಿಗಳು, ಮಂತ್ರಿ ಮಹೋದಯರು, ರಾಜಕಾರಣಿಗಳು, ಗಣ್ಯಮಾನ್ಯರು, ಮಹಿಳೆಯರು, ವಿದ್ಯಾರ್ಥಿ ಸಮೂಹ ಸೇರಿ 10 ಸಾವಿರಕ್ಕೂ ಹೆಚ್ಚು ಭಕ್ತ ಸಮೂಹ ಸಾಕ್ಷಿಯಾಗಲಿದೆ.

'ಮಾನವ ಕುಲಂ-ತಾನೊಂದೇ ವಲಂ' ಎಂಬ ಪಂಪನ ವಿಶ್ವವಾಣಿಗೆ ಪೂರಕವೆಂಬಂತೆ ಮುಕ್ತಿಮಂದಿರದಲ್ಲಿ ಬುದ್ಧ, ಬಸವ, ಶಂಕರಾಚಾರ್ಯರು, ಗುರುನಾನಕ, ಏಸುಕ್ರಿಸ್ತ, ಪೈಗಂಬರ್ ಹೀಗೆ ಸರ್ವಧರ್ಮ ಸಂಸ್ಥಾಪಕರ ಮೂರ್ತಿ ಪ್ರತಿಷ್ಠಾಪಿಸಿ ಧರ್ಮ ಸಮನ್ವಯತೆಯನ್ನು ಸಾಕ್ಷೀಕರಿಸಿದ್ದಾರೆ. ಲೋಕಕಲ್ಯಾಣಾರ್ಥ ಮಾಡುವ ಈ ಪರಮಶ್ರೇಷ್ಠ ಕಾರ್ಯ ನಾಡಿನ ಎಲ್ಲ ಭಕ್ತರ ಸಹಾಯ-ಸಹಕಾರದಿಂದಲೇ ಪೂರ್ಣಗೊಳ್ಳಬೇಕೆಂಬುದು ಶ್ರೀಗಳ ಆಶಯವಾಗಿತ್ತು. ಶ್ರೀಕ್ಷೇತ್ರದಲ್ಲಿ ಜಪ-ತಪಗಳ ಮುಖಾಂತರ ಭೂ-ಕೈಲಾಸವನ್ನೇ ಸೃಷ್ಟಿಸಿರುವ ಲಿಂ. ಗಂಗಾಧರ ಶ್ರೀಗಳವರು ಲಿಂಗೈಕ್ಯರಾದ ಬಳಿಕ, ▶▶3ನೇ ಪುಟಕ್ಕೆ



2.5 ಅಡಿ ಎತ್ತರದ ಶಿವಲಿಂಗವೊಂದರಲ್ಲಿ 6000 ಗರ್ಭಲಿಂಗಗಳಿರುವ 5000 ಶಿವಲಿಂಗಗಳು ಸೇರಿದಾಗ ತ್ರಿಕೋಟಿ ಲಿಂಗವಾಗುತ್ತದೆ. ಇಂತಹ 5000 ಶಿವಲಿಂಗಗಳು ಪ್ರತಿಷ್ಠಾಪನೆಗೊಂಡು ನಡುವೆ ಲಿಂ.ಜಗದ್ಗುರುಗಳ, ರೇಣುಕಾಚಾರ್ಯರ ಮತ್ತು ಬೃಹತ್ ಶಿವಲಿಂಗದ ಮೂರ್ತಿಯನ್ನೊಳಗೊಂಡ ಮಂದಿರ ನಿರ್ಮಾಣಗೊಳ್ಳಲಿದೆ. ಅದಕ್ಕಾಗಿ 5 ಸಾವಿರ ಶಿವಲಿಂಗ, ಲಿಂ.ವೀರಗಂಗಾಧರ ಜಗದ್ಗುರುಗಳು, ಬೃಹತ್ ಶಿವಲಿಂಗ, ಬಸವಣ್ಣ, ನಾಗಮೂರ್ತಿಗಳು ಶ್ರೀ ಕ್ಷೇತ್ರದಲ್ಲಿ ನೆಲೆ ನಿಂತಿವೆ. ಪುಣ್ಯಭೂಮಿಯಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಯಾದರೆ ಶ್ರೀ ಕ್ಷೇತ್ರ ದಕ್ಷಿಣ ಭಾರತದ ಕಾಶಿಯಷ್ಟೇ ಪವಿತ್ರ, ಪ್ರಸಿದ್ಧ ಕ್ಷೇತ್ರವಾಗಲಿದೆ. ಅದಕ್ಕಾಗಿ ಈಗಾಗಲೇ ಭರದ ಸಿದ್ಧತೆ ನಡೆಯುತ್ತಿದೆ.

### ರೈತರ ಎಲ್ಲ ಬೇಡಿಕೆಗಳೂ ಈಡೇರಿಲ್ಲ: ಮಹೇಶ ಹೊಗೆಸೊಪ್ಪಿನ

# ಬೇಡಿಕೆ ಈಡೇರಿಕೆಗೆ ಮತ್ತೆ ಹೋರಾಟಕ್ಕೆ ಸಿದ್ಧ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕಳೆದ ತಿಂಗಳು ಪಟ್ಟಣದಲ್ಲಿ ರೈತಪರ ಸಂಘಟನೆಗಳು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಬೃಹತ್ ಪ್ರತಿಭಟನೆ ನಡೆಸಿದ ವೇಳೆ ಮನವಿ ಸ್ವೀಕರಿಸಿದ ಸಚಿವ ಎಚ್.ಕೆ ಪಾಟೀಲ ಅವರು 3 ಬೇಡಿಕೆಗಳನ್ನು ಮಾತ್ರ ಈಡೇರಿಸಿದ್ದಾರೆ. ಉಳಿದ ಬೇಡಿಕೆಗಳನ್ನು ಶೀಘ್ರವೇ ಈಡೇರಿಸದಿದ್ದರೆ ರೈತರು ಮತ್ತೊಮ್ಮೆ ಹೋರಾಟಕ್ಕೆ ಸಿದ್ಧರಾಗುತ್ತೇವೆ ಎಂದು ಪಕ್ಷಾತೀತ ರೈತಪರ ಹೋರಾಟ ವೇದಿಕೆಯ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ ಹೇಳಿದರು.

ಅವರು ಪಟ್ಟಣದ ಪತ್ರಕರ್ತರ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರೈತರ ಬೇಡಿಕೆಗೆ ಮಣಿದ ಸಚಿವರು, ಅಂದು ಹೇಳಿದಂತೆ ಮಧ್ಯಂತರ ಬೆಳೆವಿಮೆ ಘೋಷಣೆ ಮಾಡಿದ್ದು, ಅದು ಹೆಸರು ಬೆಳೆಗೆ ಮಾತ್ರ ಘೋಷಣೆಯಾಗಿದೆ.

ಉಳಿದ ಬೆಳೆಗಳಿಗೂ ಈ ವಿಮೆ ತಲುಪಬೇಕು. ಲಕ್ಷ್ಮೇಶ್ವರ ತಾಲೂಕನ್ನು ಬರಗಾಲ ಪೀಡಿತ ತಾಲೂಕು ಎಂದು ಘೋಷಣೆ ಮಾಡಿ ಬರಗಾಲ ಕಾಮಗಾರಿ ಪ್ರಾರಂಭಿಸಬೇಕು ಎಂದು ಆಗ್ರಹಿಸಿದರು.

ಬೆಳೆಸಾಲ ಸಂಪೂರ್ಣ ಮನ್ನಾ ಮಾಡಿ, ರೈತರಿಗೆ ಬ್ಯಾಂಕುಗಳು ನೀಡುತ್ತಿರುವ ಕಿರುಕುಳ ತಪ್ಪಿಸಬೇಕು. ರಾಜ್ಯ ಸರಕಾರ ಕಿಸಾನ್ ಸಮ್ಮಾನ ಯೋಜನೆ ಜಾರಿಗೆ ತರಬೇಕು. ಹೀಗೆ ರೈತರ ಅನೇಕ ಬೇಡಿಕೆಗಳನ್ನು ರಾಜ್ಯ ಸರಕಾರ ಕೂಡಲೇ ಈಡೇರಿಸುವಂತೆ ಮನವಿ ಮಾಡುವದಾಗಿ ಹೇಳಿದರು.

ಕಳೆದ ತಿಂಗಳು ನಡೆದ ಪ್ರತಿಭಟನೆಯಲ್ಲಿ ರೈತರ ಜೊತೆ ಕುಳಿತುಕೊಳ್ಳಲು ನಿರಾಕರಿಸಿ ಅವಮಾನ ಮಾಡಿದ್ದ ಶಾಸಕರು ಬೇಷರತ್ ಕ್ಷಮೆಯಾಚಿಸುವಂತೆ ಕೇಳಿಕೊಂಡಿದ್ದೆವು. ಆದರೆ ಅವರು ಇಲ್ಲಿಯವರೆಗೂ ರೈತರ ಕ್ಷಮೆಯಾಚಿಸಿಲ್ಲ.

ಅಲ್ಲದೆ, ಶಾಸಕರ ಹಿಂಬಾಲಕರು ಇದೇ ತಿಂಗಳು 2ರಂದು ರೈತ ಸಂಘಟನೆಗಳು ಮತ್ತು ಹೋರಾಟಕ್ಕೆ ರಸ್ತೆಯಲ್ಲಿ ಅವಹೇಳನಕಾರಿ ರೀತಿಯಲ್ಲಿ ಮಾತನಾಡಿರುವುದು ಇದು ರೈತರನ್ನು ಮತ್ತಷ್ಟು ರೊಚ್ಚಿಗೇಳುವಂತೆ ಮಾಡಿದೆ.

ಈ ಕುರಿತಂತೆ ಅವರ ಹಿಂಬಾಲಕರಿಗೆ ಶಾಸಕರು ಬೆಂಬಲ ನೀಡುತ್ತಿದ್ದಾರೆ ಎನ್ನುವ ಸಂಶಯ ಬರುತ್ತಿದ್ದು, ಇದಕ್ಕೆ ಸಂಬಂಧಿಸಿದ ದಾಖಲೆಗಳಿವೆ.

ಈ ವಿಷಯದ ಬಗ್ಗೆ ಎಸ್‌ಪಿಯವರಿಗೆ ಇಷ್ಟರಲ್ಲಿಯೇ ದೂರು ಸಲ್ಲಿಸುವದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಟಾಕಪ್ಪ ಸಾತಪೂತೆ, ಶಿವಾನಂದ ಲಿಂಗಶೆಟ್ಟಿ, ಆನಂದ ಅಮರಶೆಟ್ಟಿ, ಸಂಗಮೇಶ ಮಡಿವಾಳರ ಹಾಜರಿದ್ದರು.

ಕೃಷಿಕ ಸಮಾಜ ನವದೆಹಲಿಯ ತಾಲೂಕು ಅಧ್ಯಕ್ಷ ಚನ್ನಪ್ಪ ಷಣ್ಮುಖಿ ಮಾತನಾಡಿ, ಗೊಜನೂರು ಗ್ರಾಮದಲ್ಲಿ ಅಕ್ರಮವಾಗಿ ಮದ್ದು ಸಂಗ್ರಹಣೆ ಮಾಡಲಾಗುತ್ತಿದೆ. ಇದರ ಬಗ್ಗೆ ಇಲಾಖೆ ಗಮನ ಹರಿಸಬೇಕು. ರಸ್ತೆಗಳು ಹದಗೆಟ್ಟ ಹಿನ್ನೆಲೆಯಲ್ಲಿ ರಸ್ತೆ ಬದಿಯ ಹೊಲಗಳಲ್ಲಿನ ಬೆಳೆಗಳು ಧೂಳಿನಿಂದ ಆವೃತ್ತವಾಗಿದ್ದು, ಕೂಡಲೇ ರಸ್ತೆ ದುರಸ್ಥಿ ಕೈಗೊಳ್ಳುವಂತೆ ಆಗ್ರಹಿಸಿದರು.

## ನಾಡನ್ನು ಹಸಿರಾಗಿಸುವ ಸಂಕಲ್ಪ ಮಾಡೋಣ

**■ವಿಜಯಸಾಕ್ಷಿ ಸುದ್ದಿ, ಗದಗ**

ಈ ಭೂಮಿಯ ಮೇಲೆ ಮನುಷ್ಯರಷ್ಟೇ ಅಲ್ಲದೆ, ಪ್ರಾಣಿ-ಪಕ್ಷಿಗಳೂ ವಾಸವಾಗಿವೆ. ಸಾವಿರಾರು ಜಾತಿಯ ಪ್ರಾಣಿ-ಪಕ್ಷಿಗಳೊಂದಿಗೆ ಸಮತೋಲನ ಕಾಯ್ದುಕೊಳ್ಳಲು ಅರಣ್ಯವನ್ನು ಉಳಿಸಿ ಬೆಳೆಸಬೇಕಿದೆ. ಮಕ್ಕಳು ತಮ್ಮ ಜನ್ಮದಿನವನ್ನು ಆಚರಿಸುವಾಗ ಮನೆಯಲ್ಲಿ ಒಂದು ಸಸಿ ನೆಟ್ಟು ಅದನ್ನು ಬೆಳೆಸಿ ನಾಡನ್ನು ಹಸಿರನ್ನಾಗಿಸುವ ಸಂಕಲ್ಪ ಮಾಡಬೇಕೆಂದು ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ ಸಂಕನೂರ ಕರೆ ನೀಡಿದರು.

ಇಲ್ಲಿನ ಎಸ್.ಎಂ ಕೃಷ್ಣಾ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾ ಪಂಚಾಯತ ಹಾಗೂ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಹರ ವಲಯ ಗದಗ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಇವರ ಸಹಯೋಗದಲ್ಲಿ 'ಸಸ್ಯ ಶ್ಯಾಮಲ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ಕಡೇಮನಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಈಶ್ವರ ನಾಯ್ಕ, ಲಕ್ಷ್ಮೀ ಸಿದ್ದಮನಹಳ್ಳಿ, ಜಿ.ಎಲ್ ಬಾರಾಟಕ್ಕೆ, ಎಂ.ಎ ರಡ್ಡೇರ, ಡಿ.ಆಯ್ ಅಸುಂಡಿ, ಎಸ್.ಸಿ ನಾಗರಳ್ಳಿ, ವಿವೇಕಾನಂದಗೌಡ ಪಾಟೀಲ, ಎಸ್.ಕೆ ಮಂಗಳಗುಡ್ಡ, ಎಸ್.ಡಿ ಕುರಿ, ಮುಲ್ಲಾ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಿಆರ್‌ಪಿ, ಬಿಆರ್‌ಪಿ, ಶಾಲಾ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಿಕ್ಷಕರಾದ ಮಂಜು ಕೆ.ಹುಯಿಲಗೋಳ ಗದಗ ಜಿಲ್ಲಾ ಅತ್ಯುತಮ ಶಿಕ್ಷಕ ಪ್ರಶಸ್ತಿ ಪಡೆದ ನಿಮಿತ್ತ ಸನ್ಮಾನಿಸಲಾಯಿತು.

ಆರ್.ಎಸ್ ಬುರಡಿ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಕಾಶ ಮಂಗಳೂರ ನಿರೂಪಿಸಿದರು. ಹೆಚ್.ಆರ್ ಕೋಣಿಮನಿ ವಂದಿಸಿದರು.



### ಶಿರಹಟ್ಟಿ ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಶಾಸಕ ಡಾ. ಲಮಾಣಿ

## ಕ್ರೀಡಾಳುಗಳು ನಿರ್ಣಾಯಕರ ತೀರ್ಪುಗಳನ್ನು ಗೌರವಿಸಿ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ನಾಡಹಬ್ಬ ದಸರಾ ಸವಿ ನೆನಪಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾಪಟುಗಳಿಗೆ ಸರಕಾರ ತಾಲೂಕಾ ಮಟ್ಟದಿಂದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಇಂತಹ ಕ್ರೀಡಾಕೂಟವನ್ನು ಆಯೋಜಿಸಿದೆ. ಕ್ರೀಡಾಪಟುಗಳು ಸ್ಪರ್ಧಾ ಮನೋಭಾವನೆಯಿಂದ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕೆಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಮಂಗಳವಾರ ಶಿರಹಟ್ಟಿಯ ಶ್ರೀ ಎಸ್.ಎಂ ಡಬಾಲಿ ತಾಲೂಕಾ ಕ್ರೀಡಾಂಗಣದಲ್ಲಿ ಜಿ.ಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜರುಗಿದ 2023-24ನೇ ಸಾಲಿನ ತಾಲೂಕಾ ಮಟ್ಟದ ದಸರಾ ಕ್ರೀಡಾಕೂಟವನ್ನು ಕ್ರೀಡಾ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು.

ಸೋಲು-ಗೆಲುವು ಮುಖ್ಯವಲ್ಲ. ಆಟಗಳಲ್ಲಿ ನಿರ್ಣಾಯಕರು ನೀಡುವ ತೀರ್ಪನ್ನು ಗೌರವದಿಂದ ಸ್ವೀಕರಿಸಬೇಕು. ಯಾವುದೇ ಕಾರಣಕ್ಕೂ ಅವರೊಂದಿಗೆ ವಾಗ್ವಾದ ನಡೆಸಬಾರದು. ನಿರ್ಣಾಯಕರಿಗೂ ಸಹ ನ್ಯಾಯಯುತ ನಿರ್ಣಯ ನೀಡಲು ಈಗಾಗಲೇ ಸೂಚಿಸಲಾಗಿದೆ. ಎಲ್ಲ ವಿದ್ಯಾರ್ಥಿಗಳು ನಿಮ್ಮ ಪ್ರತಿಭೆಗೆ ತಕ್ಕ ಕ್ರೀಡಾಕೂಟದ ವಿವಿಧ ವಿಭಾಗಗಳಲ್ಲಿ ಭಾಗವಹಿಸಿ ಜಿಲ್ಲೆ, ವಲಯ ಹಾಗೂ ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಹೇಳಿದರು.

ತಾಲೂಕಾ ಕ್ರೀಡಾಧಿಕಾರಿ ಎಂ.ಡಿ ತಳ್ಳಳ್ಳಿ ▶▶3ನೇ ಪುಟಕ್ಕೆ

> ತಾಲೂಕಿನ ಎಲ್ಲ 14 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪ್ರದೇಶಗಳ ಶಾಲಾ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಸಂತೋಷದ ವಿಷಯ. ಕ್ರೀಡಾಕೂಟದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಅಥ್ಲೆಟಿಕ್ಸ್ ಸ್ಪರ್ಧೆಗಳು, ಗುಂಪು ಸ್ಪರ್ಧೆಗಳು ನಡೆಯುತ್ತಿದ್ದು, ಇವುಗಳಲ್ಲಿ ಭಾಗವಹಿಸುವಿಕೆ ಅತೀ ಮುಖ್ಯವಾಗಿದೆ.
>
> **- ಡಾ. ಚಂದ್ರು ಲಮಾಣಿ.**
> ಶಾಸಕರು, ಶಿರಹಟ್ಟಿ.





ಶ್ರೀ ವಿ ಪಿ ಗಾಲಾ ಸ್ಕೂಲ್ ಆಫ್ ನರ್ಸಿಂಗ್ ಹಾಗೂ ಇನ್ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಗದಗ.ದಲ್ಲಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಅಂತಿಮ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ಸೆಪ್ಟೆಂಬರ್ 12ರಂದು ಕಾಲೇಜಿನ ಆವರಣದಲ್ಲಿ ನಡೆಯಿತು . ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷರು ಶ್ರೀಮತಿ ರಚನಾ ಗಾಲಾ, ಸೆಕ್ರೆಟರಿ ಶ್ರೀ ಪಂಕಜ್ ಗಾಲಾ, ನಿರ್ದೇಶಕರು ಶ್ರೀ ಗುಂಜನ ಗಾಲಾ, ಕಾಲೇಜಿನ ಪ್ರಿನ್ಸಿಪಾಲರು ಶ್ರೀ ಅಮರಯ್ಯ ಚಿನ್ನಯ್ಯನಮಠ ರವರು ಹಾಜರಿದ್ದರು. .ಕಾರ್ಯಕ್ರಮ ದಲ್ಲಿ ಕಾಲೇಜಿನ ಎಲ್ಲ ಸಿಬ್ಬಂದಿ ವರ್ಗ, ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಗದಗ ತಾಲೂಕಿನ ನೀಲಗುಂದ ಗ್ರಾಮದಲ್ಲಿ ವೀರಭದ್ರೇಶ್ವರ ಹಾಗೂ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಮನೆ ಮನೆಗೆ ತೆರಳಿ ಉಡಿ ತುಂಬಿಸಿಕೊಳ್ಳುವ ಕಾರ್ಯಕ್ರಮ ನೆರವೇರಿತು.



ಶ್ರಾವಣ ಮಾಸದ ಕೊನೆಯ ಸೋಮವಾರದಂದು ಗದಗ ತಾಲೂಕಿನ ಹರ್ತಿ ಗ್ರಾಮದಲ್ಲಿ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ನೆರವೇರಿದ ಬಸವೇಶ್ವರ ಜಾತ್ರೆಯ ರಥೋತ್ಸವದ ಮನಮೋಹಕ ದೃಶ್ಯ ಕ್ಯಾಮೆರಾ ಕಣ್ಣಿನಲ್ಲಿ ಕಂಡುಬಂದಿದ್ದು ಹೀಗೆ...



ಗದಗ ತಾಲೂಕಿನ ಅಡವಿಸೋಮಾಪೂರ ಗ್ರಾಮದ ಆರಾಧ್ಯ ದೇವರಾದ ಶ್ರೀ ಗೋಣಿ ಬಸವೇಶ್ವರ ರಥೋತ್ಸವವು ಶ್ರಾವಣ ಸೋಮವಾರದಂದು ಸಕಲ ವಾದ್ಯ ಮೇಳಗಳೊಂದಿಗೆ, ಅಪಾರ ಭಕ್ತ ಸಮೂಹದ ನಡುವೆ ಸಂಭ್ರಮ-ಸಡಗರದಿಂದ ಜರುಗಿತು. (ಚಿತ್ರ: ಮುತ್ತಣ್ಣ ಹುಲಗಣ್ಣವರ)



ಮುಂಡರಗಿಯ ಡೋಣಿ ಗ್ರಾಮದಲ್ಲಿ ಸೋಮವಾರ ಸಂಜೆ ಶ್ರೀ ಸಿದ್ಧಲಿಂಗೇಶ್ವರ ರಥೋತ್ಸವ ಸಂಭ್ರಮದಿಂದ ಜರುಗಿತು. ಭಕ್ತರು ಬಾಳೆ ಹಣ್ಣು, ಉತ್ತತ್ತಿಗಳನ್ನು ತೇರಿಗೆ ಎಸೆದು, ಇಷ್ಟಾರ್ಥ ಈಡೇರಲಿ ಎಂದು ಬೇಡಿಕೊಂಡರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

**ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.**
**ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..**
**ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.**
**E-mail: vijayasakshidaily@gmail.com**
**ಮೊ : 9019256545**

### ಶ್ರೀ ಜ. ರೇಣುಕ ವಿಜಯ ಪುರಾಣ ಪ್ರವಚನ ಧರ್ಮ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳು

# ಚಿಂತೆಗಳ ಕತ್ತಲಲ್ಲಿ ಚಿಂತನೆಯೇ ಆಶಾಕಿರಣ

■ **ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**

ಮನುಷ್ಯ ಹೇಗೆ ಬಾಳಬೇಕೆನ್ನುವ ನೀತಿ-ನಿಯಮಗಳ ಸಂಹಿತೆಯೇ ಧರ್ಮ. ಸಂಕಷ್ಟಗಳು ಮತ್ತು ಸಮಸ್ಯೆಗಳು ದೂರವಾಗಿ ಮಾನವೀಯ ಸಂಬಂಧಗಳು ಬೆಳೆದು ಬರುವಂತಾಗಲು ಮಹಾತ್ಮರ ಚಿಂತನೆಗಳು ಆಶಾಕಿರಣವಾಗಿವೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರಾವಣ ಕೊನೆಯ ಸೋಮವಾರ ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಜರುಗಿದ ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಜೀವನದಲ್ಲಿ ವಿನಯ ಮತ್ತು ಕ್ರಿಯಾಶೀಲ ಗುಣಗಳನ್ನು ಅಳವಡಿಸಿಕೊಂಡು ಬಾಳಬೇಕು. ಫಲ ಹೊತ್ತ ಬಾಳೆ, ತೆನೆ ಹೊತ್ತ ಪೈರು ಬಾಗಿರುತ್ತದೆ. ಇವುಗಳಿಂದ ಮನುಷ್ಯ ವಿಧೇಯತೆಯ ಸದ್ಗುಣಗಳನ್ನು ಕಲಿಯಬಹುದು.

ಮನುಷ್ಯನಲ್ಲಿರುವ ಮೃಗತ್ವವನ್ನು ಹೋಗಲಾಡಿಸುವುದೇ ಮಹಾತ್ಮರ ಜೀವನದ



ಗುರಿಯಾಗಿದೆ. ಸತ್ಯ ಸನ್ಮಾರ್ಗದ ಕಡೆಗೆ ಕರೆದೊಯ್ಯುವುದೇ ಅವರ ಗುರಿಯಾಗಿದೆ ಎಂದರು.

ಪುರಾಣ ಪ್ರವಚನ ಮಾಡಿದ ಮಾದನ ಹಿಪ್ಪರಗಿ ಹಿರೇಮಠದ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಪ್ರೀತಿ, ವಾತ್ಸಲ್ಯ, ಸಹನೆ, ಕರುಣೆ ಮತ್ತು ಪರೋಪಕಾರ ಸದ್ಗುಣಗಳನ್ನು ಬೆಳೆಸಲು ಶ್ರೀ ಜಗದ್ಗುರು ರೇಣುಕಾಚಾರ್ಯರು ನಿರಂತರ ಶ್ರಮಿಸಿದ ಆಚಾರ್ಯ ಪುರುಷರು. ನಮ್ಮ ನಡೆ-ನುಡಿಗಳಲ್ಲಿ ಸೌಜನ್ಯ ತುಂಬಿರಬೇಕು. ಯೋಜನೆ ಮತ್ತು ಚಿಂತನೆಗಳಲ್ಲಿ ನಮ್ಮ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತದೆ. ಇದು ಹಣ ಅಧಿಕಾರದಿಂದ ಬರುವಂತಹುದ್ದಲ್ಲ. ಉತ್ತಮ ನಡೆ-ನುಡಿಗಳಿಂದ ಜೀವನದಲ್ಲಿ ಶ್ರೇಯಸ್ಸು ಕಾಣಲು ಸಾಧ್ಯ. ವಿಶ್ವ ಬಂಧುತ್ವದ ಶಾಂತಿ-ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಟ್ಟ ವಿಚಾರ ಧಾರೆಗಳು ಸರ್ವ ಕಾಲಕ್ಕೂ ಸರ್ವರಿಗೂ ಅನ್ವಯಿಸುತ್ತವೆ ಎಂದರು.

> ವಿಶ್ವ ಧರ್ಮದ ವಿಭು ಶ್ರೀ ಜಗದ್ಗುರು ರೇಣುಕಾಚಾರ್ಯರು ದುಷ್ಟ ದುರಹಂಕಾರದ ದರ್ಪವನ್ನು ನಾಶ ಮಾಡಿ, ಶಿವಜ್ಞಾನದ ಅರಿವನ್ನು ಮೂಡಿಸಿದ ಪರಮಾಚಾರ್ಯರು. ಮಾನವೀಯತೆಯ ಮೌಲ್ಯಗಳನ್ನು ಬಿತ್ತಿ ಬೆಳೆಯಲು ನಿರಂತರ ಶ್ರಮಿಸಿದ ದಿವ್ಯ ಚೇತನ. ಅವರು ತೋರಿದ ದಾರಿ, ಕೊಟ್ಟ ಸಂದೇಶ ಸರ್ವರ ಬಾಳಿಗೆ ಬೆಳಕು ಮತ್ತು ಬಲವನ್ನು ತಂದು ಕೊಡುತ್ತದೆ.
> **– ಡಾ. ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಮಳಲಿ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವೀರಶೈವ ಧರ್ಮ ವಿಶ್ವಬಂಧುತ್ವವನ್ನು ಸಾರಿದೆ. ಕಾಯಕ ಮತ್ತು ದಾಸೋಹಕ್ಕೆ ಆದ್ಯತೆ ಕೊಟ್ಟ ವೀರಶೈವ ಧರ್ಮ ಸಕಲರಿಗೂ ಒಳಿತನ್ನು ಬಯಸಿದೆ ಎಂದರು. ಕೆ ಬಿದರೆ ಕಲ್ಮಠದ ಪ್ರಭುಕುಮಾರ ಸ್ವಾಮಿಗಳು, ಸಿಂದಗಿ ಅದಿಶೇಷ ಸಂಸ್ಥಾನ ಹಿರೇಮಠದ ಶ್ರೀಗಳು ಉಪಸ್ಥಿತರಿದ್ದರು.

ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ಸಂಗ್ರಹಿಸಿದ 'ವರ್ಷದ ವಾರ್ತಾ ಸಂಕಲನ' ಕೃತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

ಸೇವೆ ಸಲ್ಲಿಸಿದ ಹಲವಾರು ಗಣ್ಯರಿಗೆ ಮತ್ತು ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಶುಭ ಹಾರೈಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಶಿವಮೊಗ್ಗದ ಶಾಂತಾ ಆನಂದ ಇವರಿಂದ ಭಕ್ತಿಗೀತೆ ಜರುಗಿತು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು.

ಪ್ರಾತಃಕಾಲ ಶ್ರೀ ಪೀಠದ ಎಲ್ಲ ದೈವಗಳಿಗೆ ಶ್ರಾವಣ ವಿಶೇಷ ಪೂಜೆ ಮತ್ತು ಪುಷ್ಪಾಲಂಕಾರ ನಡೆಯಿತು. ಶ್ರೀ ರಂಭಾಪುರಿ ಜಗದ್ಗುರುಗಳು ಲೋಕಕಲ್ಯಾಣಕ್ಕಾಗಿ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಬಂದ ಭಕ್ತರಿಗೆ ಶುಭ ಹಾರೈಸಿದರು.

## ಪ್ರೊ. ಕೆರಿಮನಿಯವರ ಅಗಲಿಕೆ ಜಿಲ್ಲೆಗೆ ತುಂಬಲಾರದ ನಷ್ಟ



■ **ವಿಜಯಸಾಕ್ಷಿ ಸುದ್ದಿ, ನರಗುಂದ**

ಕನ್ನಡ ಹಾಗೂ ಕನ್ನಡತನದ ಶ್ರೇಷ್ಠ, ಶ್ರೀಮಂತ ಪರಂಪರೆಯನ್ನು ಉಳಿಸಿ-ಬೆಳೆಸಿದ ಪ್ರೊ ಸಿ.ವ್ಹಿ ಕೆರಿಮನಿ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ಕಳೆದ 4 ದಶಕಗಳಿಂದ ದಣಿವರಿಯದೇ ತಾಯಿ ಕನ್ನಡಮ್ಮನ ಸೇವೆ ಮಾಡಿದ ಜಿಲ್ಲೆಯ ಸಾಹಿತ್ಯಿಕ ರಾಯಬಾರಿಯಾಗಿದ್ದರು. 30ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿ, ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಪೂಜ್ಯ ಶಾಂತಲಿಂಗ ಶ್ರೀಗಳು ಹೇಳಿದರು.

ಅವರು ತಾಲೂಕಿನ ಭೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ಕೆರಿಮನಿ ಅವರಿಗೆ ನುಡಿನಮನ ಹಾಗೂ 'ಚೆಂಬೆಳಕು ಚೆಲ್ಲಿದವರು ಉಪನ್ಯಾಸ ಮಾಲಿಕೆ-17' ಸಮಾರಂಭದಲ್ಲಿ ಮಾತನಾಡಿದರು.

ಬೆಳ್ವೊಲ ಬೆಳಕು ಎಂಬ ಗ್ರಂಥದ ಮೂಲಕ ಇಡೀ ಜಿಲ್ಲೆಯ ಮಾಹಿತಿಯನ್ನು ತಿಳಿಸುವ ಪುಸ್ತಕವನ್ನು ಸಂಪಾದಿಸಿದ ಕೀರ್ತಿ ಕೆರಿಮನಿಯವರಿಗೆ ಸಲ್ಲುತ್ತದೆ. ಮಾತು ಮತ್ತು ಕೃತಿ ಎರಡನ್ನೂ ಸೇರಿಸಿದ ಶ್ರೇಷ್ಠ ಸಾಹಿತಿಯ ಅಗಲಿಕೆಯಿಂದ ಸಾಹಿತ್ಯ ಲೋಕದ ಕೊಂಡಿ ಕಳಚಿದ್ದು, ಜಿಲ್ಲೆಗೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದರು.

ಕಸಾಪ ನಿಕಟಪೂರ್ವ ಅಧ್ಯಕ್ಷೆ ಮಂಗಳಾ ಪಾಟೀಲ ಮಾತನಾಡಿ, ಬರೆದಂತೆ ಬದುಕಿದ ಪ್ರೊ. ಕೆರಿಮನಿ ಅವರು ನಮಗೆಲ್ಲ ಆದರ್ಶಪ್ರಾಯರು. 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಪೂರ್ಣ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ಕೆರಿಮನಿಯವರು ಅಪರೂಪದ ವ್ಯಕ್ತಿತ್ವದವರು. ಲಕ್ಷ್ಮೇಶ್ವರದ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿದ ಅವರು ಶ್ರೇಷ್ಠ ಸಾಹಿತಿಗಳಾಗಿದ್ದರು ಎಂದು ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಪ್ರೊ. ಬಿ.ಸಿ ಹನಮಂತಗೌಡ್ರ, ತ್ಯಾಗವೀರ ಶಿರಸಂಗಿ ಲಿಂಗರಾಜರ ಕುರಿತು ಉಪನ್ಯಾಸ ನೀಡಿದರು. ವೇದಿಕೆ ಮೇಲೆ ಅಶೋಕ ಶೇಬಣ್ಣವರ, ಶಿಕ್ಷಕ ಡಿ.ಆರ್ ಗದ್ದನಕೇರಿ, ಡಾ. ಎ.ಆಯ್ ಹುಯಿಲಗೋಳ, ಸುಜಾತಾ ಶೇಬಣ್ಣವರ, ಆರ್.ಬಿ ಚಿನಿವಾಲರ, ಆರ್.ಕೆ ಐನಾಪೂರ ಮುಂತಾದವರು ಉಪಸ್ಥಿತರಿದ್ದರು.

## ಸಂಪನ್ನಗೊಂಡ ವರವಿಯ ಶ್ರೀ ಮೌನೇಶ್ವರರ ಮಹಾರಥೋತ್ಸವ

■ **ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶ್ರಾವಣ ಮಾಸದ ಕೊನೆಯ ಸೋಮವಾರದಂದು ಸಂಜೆ ಶಿರಹಟ್ಟಿ ತಾಲೂಕಿನ ವರವಿ ಕ್ಷೇತ್ರಾಧಿಪತಿ ಶ್ರೀ ಮೌನೇಶ್ವರರ ಮಹಾರಥೋತ್ಸವವು ಸಹಸ್ರಾರು ಭಕ್ತರ ಉಪಸ್ಥಿತಿಯಲ್ಲಿ ಸಡಗರ-ಸಂಭ್ರಮದಿಂದ ಜರುಗಿತು.

ರಥೋತ್ಸವ ನಿಮಿತ್ತ ಬೆಳಿಗ್ಗೆ 6.15ಕ್ಕೆ ಶ್ರೀಮಠದ ಆವರಣದಲ್ಲಿ ಧ್ವಜಾರೋಹಣ, ತದನಂತರ 9 ಗಂಟೆಗೆ ಮಹಾಯಜ್ಞ ಜರುಗಿತು. ಇದರ ಪೌರೋಹಿತ್ಯವನ್ನು ಹುಬ್ಬಳ್ಳಿಯ ಶಂಕರಾಚಾರ್ಯ ಕಡ್ಲಾಸ್ಕರ ಹಾಗೂ ಮುಕುಂದಾಚಾರ್ಯ ಗುರುವಿನ ವಹಿಸಿದ್ದರು. ಸಂಜೆ 5.30ರ ಸಮಯಕ್ಕೆ ಮೌನೇಶ್ವರರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯೊಂದಿಗೆ ಭವ್ಯ ಮೆರವಣಿಗೆಯ ಮೂಲಕ ರಥದ ಬೀದಿಗೆ ತರಲಾಯಿತು. ಅಲ್ಲಿ ಸಂಪ್ರದಾಯದಂತೆ ಪೂಜೆಯನ್ನು



ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಭಕ್ತರು ಉತ್ತತ್ತಿ, ಬಾಳೆಹಣ್ಣನ್ನು ರಥಕ್ಕೆ ಎಸೆಯುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಬೆಳಿಗ್ಗೆಯಿಂದಲೇ ಭಕ್ತರ ದಂಡು ಆಗಮಿಸುತ್ತಲೇ ಇತ್ತು. ಗರ್ಭಗುಡಿಯಲ್ಲಿ ವಿಶೇಷವಾಗಿ ಅಲಂಕೃತಗೊಂಡ ಮೌನೇಶ್ವರರ ಉದ್ಭವಮೂರ್ತಿಯ ದರ್ಶನವನ್ನು ಸರತಿ ಸಾಲಿನಲ್ಲಿ ನಿಂತು ಪಡೆದುಕೊಂಡರು.

ರಥೋತ್ಸವದಲ್ಲಿ ಚಂಡೆ ಮದ್ದಳೆ, ಸಮ್ಮಾಳಗಳು, ನಂದೀಧ್ವಜ ಹಾಗೂ ಡೊಳ್ಳಿನ ಮಜಲುಗಳು ಪಾಲ್ಗೊಂಡಿದ್ದವು. ಶಿರಹಟ್ಟಿ ಸಿಪಿಐ ನಾಗರಾಜ ಮಾಢಳ್ಳಿ, ಪಿಎಸ್‌ಐ ಈರಣ್ಣ ರಿತ್ತಿ ಹಾಗೂ ಸಿಬ್ಬಂದಿಗಳು ಬಂದೋಬಸ್ತ ವ್ಯವಸ್ಥೆಯನ್ನು ಕೈಗೊಂಡಿದ್ದರು. ವರವಿಯ ವಿರುಪಾಕ್ಷ ಸ್ವಾಮೀಜಿ, ದೇವಸ್ಥಾನ ಹಾಗೂ ಮಠದ ವಿಕಾಸ್ ಟ್ರಸ್ಟ್‌ನ ಅಧ್ಯಕ್ಷ-ಉಪಾಧ್ಯಕ್ಷರು ಮತ್ತು ಸದಸ್ಯರು, ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು.

## ವಚನಗಳನ್ನು ಆರಂಭಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ

■ **ವಿಜಯಸಾಕ್ಷಿ ಸುದ್ದಿ, ಗದಗ**

ಬಸವಣ್ಣನವರು ತಮ್ಮ ಜ್ಞಾನದ ಮೂಲಕ ಕಪ್ಪಡಿಯಲ್ಲಿ ಸತತ ಹನ್ನೆರಡು ವರ್ಷಗಳಕಾಲ ತಪಸ್ಸನ್ನು ಮಾಡಿದರು. ನಂತರ ಇಷ್ಟಲಿಂಗವನ್ನು ಕಂಡು ಹಿಡಿದರು. ವಚನ ಸಾಹಿತ್ಯಕ್ಕೆ ಮೂಲ ಕಾರಣೀಭೂತ ನಾಯಕ ಬಸವಣ್ಣನವರು. ಕನ್ನಡದಲ್ಲಿ ವಚನಗಳನ್ನು ಆರಂಭಿಸಿದ ಕೀರ್ತಿ ಬಸವಣ್ಣವರಿಗೆ ಸಲ್ಲುತ್ತದೆ ಎಂದು ಶರಣ ಪ್ರಕಾಶ ಅಸುಂಡಿ ಅವರು ಹೇಳಿದರು.

ಅವರು ಗದುಗಿನ ಪಂಚಾಕ್ಷರಿ ನಗರದ ಶರಣಪ್ರೇಮಿ ಚನ್ನಬಸಪ್ಪ ಅಂಗಡಿ ಅವರ ನಿವಾಸದಲ್ಲಿ ನಡೆದ ವಚನ ಶ್ರಾವಣದ 25ನೇ ದಿನದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಶರಣರು ಯಾವುದೇ ಒಂದು ಜಾತಿ, ಧರ್ಮ, ವರ್ಗ, ವರ್ಣ, ಭಾಷೆಗಳ ಹೊರತಾಗಿ ಸಮಾನತೆಯು ಬಸವಣ್ಣನವರ ತತ್ವಕ್ಕೆ ಬಂದಿರುವುದು ಹೆಮ್ಮೆಯ ವಿಷಯವಾಗಿದೆ



ಎಂದರು. ಅನುಭವಿಗಳಾದ ಶಿವಣ್ಣ ಮುಗದ, ಗೌರಕ್ಕ ಬಡಿಗಣ್ಣವರ, ಗಿರಿಜಾ ಹಿರೇಮಠ, ಗಂಗಮ್ಮ ಹೂಗಾರ, ಅಶೋಕ ಬರಗುಂಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ರೂಪಶ್ರೀ ಪಿ.ಬಾಳಿಕಾಯಿ, ಮಂಜುಳಾ ಹಾಸಲಕರ, ಅಶೋಕಣ್ಣ ಬರಗುಂಡಿ, ಅನ್ನಪೂರ್ಣಕ್ಕ ಬರಗುಂಡಿ, ರೇಣುಕಾ ಹಾಸಲಕರ, ರೇಖಾ ವಕ್ಕಲರ, ಚನ್ನಬಸಪ್ಪ ಅಂಗಡಿ, ಸಾವಿತ್ರಿ ಅಂಗಡಿ, ಪ್ರಸನ್ನ ಅಂಗಡಿ, ಪೂರ್ಣಿಮಾ ಬಿರಾದಾರ, ಪ್ರಮೋದಿನಿ ಮೇರವಾಡೆ, ಲಕ್ಷ್ಮೀ ನಿಡವಣಿ, ವಿ.ಕೆ ಕರೇಗೌಡ್ರ, ಸಿ.ಆರ್ ಗಡಾದ, ಸೋಮಶೇಖರ ಪುರಾಣಿಕ, ಪ್ರಕಾಶ್ ಅಸುಂಡಿ, ಶಿವಣ್ಣ ಮುಗದ, ಎಸ್. ಎನ್ ಹಿರೇಸಕ್ಕನಗೌಡ್ರು, ಕೆ.ವಿ ಗೋಣಿ, ಗಿರಿಜಾ ಹಿರೇಮಠ, ಪುಷ್ಪಾ ಹಿರೇಮಠ, ನಾಗಭೂಷಣ ಬಡಿಗಣ್ಣವರ, ಗೌರಕ್ಕ ಬಡಿಗಣ್ಣವರ, ಲೀಲಾವತಿ ಬಳ್ಳೊಳ್ಳಿ, ಶೈಲಾ ಹೊಂಬಳ, ರಾಜೇಶ್ವರಿ ಹೊಂಬಳ, ಅನಿಲ್ ಶಟಗಾರ, ವಿಮಲಾ ಬೆಲ್ಲದ, ಪಲ್ಲವಿ ಬೆಲ್ಲದ, ಶಕುಂತಲಾ ಗದಗಿನ, ಮಹಾಂತೇಶ ಅಂಗಡಿ, ಅಮೃತ ಅಂಗಡಿ, ಶೇಖಣ್ಣ ಕವಳಿಕಾಯಿ ಮುಂತಾದವರಿದ್ದರು. ಚನ್ನಬಸಪ್ಪ ಅಂಗಡಿ ಸ್ವಾಗತಿಸಿದರು. ಗಂಗಮ್ಮ ಹೂಗಾರ ನಿರೂಪಿಸಿದರು.

## ಕಂಠಿ ಬಸವೇಶ್ವರ ರಥೋತ್ಸವ ಸಂಪನ್ನ

■ **ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಅಬ್ಬಿಗೇರಿ ಗ್ರಾಮದ ಶ್ರೀ ಕಂಠಿ ಬಸವೇಶ್ವರ ಜಾತ್ರಾ ಮಹೋತ್ಸವು ಸೋಮವಾರ ಸಡಗರ-ಸಂಭ್ರಮದಿಂದ ಜರುಗಿತು.

ರಥೋತ್ಸವದಲ್ಲಿ ಭಜನೆ, ಡೊಳ್ಳು ವಾದ್ಯ ಮೇಳಗಳ ಝೇಂಕಾರದೊಂದಿಗೆ ಮಹಿಳೆಯರು ಆರತಿ, ಕಳಸ ಹಿಡಿದು ದೇವಸ್ಥಾನಕ್ಕೆ ಆಗಮಿಸಿ ರಥಕ್ಕೆ ಪ್ರದಕ್ಷಿಣೆ ಹಾಕಿದರು. ಭಕ್ತರು ಉತ್ತತ್ತಿ, ಫಲಪುಷ್ಪಗಳನ್ನು ತೇರಿನ ಮೇಲೆ ತೂರಿ, ಘೋಷಣೆಗಳನ್ನು ಕೂಗಿ ಭಕ್ತಿ ಮೆರದರು.

ಅಬ್ಬಿಗೇರಿ, ನರೇಗಲ್ಲ, ಕೋಟುಮಚಗಿ, ಕುರುಡಗಿ, ಯರೇಬೇಲೇರಿ, ಡ.ಸ ಹಡಗಲಿ, ಗುಜಮಾಗಡಿ, ನಾಗರಾಳ, ನೀರಲಗಿ, ಜಕ್ಕಲಿ, ಮಾರನಬಸರಿ, ನಿಡಗುಂದಿ, ಕೊಪ್ಪಳ, ಯಲಬುರ್ಗಾ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ದೇವಸ್ಥಾನದಲ್ಲಿ ಪೂಜೆ, ಅಭಿಷೇಕವನ್ನು ಶರಣಯ್ಯ ಅರಳಲೆಮಠ ಹಾಗೂ ದೇವಸ್ಥಾನದ ಅರ್ಚಕ ಮಂಜುನಾಥ ಪೂಜಾರ ನೆರವೇರಿಸಿದರು.

ಶ್ರಾವಣ ಮಾಸದ ಪ್ರತಿ ಸೋಮವಾರ ಬೆಳ್ಳಿ ಮೂರ್ತಿ, ಪಲ್ಲಕ್ಕಿ ಮೆರವಣಿಗೆ ಜರುಗಿದ್ದು, ಶ್ರಾವಣ ಮಾಸದ ಕಡೆಯ ಸೋಮವಾರ ಕಂಠಿ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ ಮತ್ತು ಎಲೆ ಪೂಜೆ ಮಾಡಿದ ನಂತರ ನೈವೇದ್ಯ ಅರ್ಪಣೆ, ಅನ್ನ ಸಂತರ್ಪಣೆ ನೆರವೇರಿಸಲಾಯಿತು.

### ಗುರು-ಶಿಷ್ಯ ಪರಂಪರೆಯ 'ಗುರುವಂದನಾ' ಕಾರ್ಯಕ್ರಮದಲ್ಲಿ ಶ್ರೀ ಶಂಕರಾನಂದ ಸ್ವಾಮಿಗಳು

# ಪ್ರಾಥಮಿಕ ಶಿಕ್ಷಣ ಮಕ್ಕಳ ಬದುಕಿಗೆ ಬುನಾದಿ

■ **ವಿಜಯಸಾಕ್ಷಿ ಸುದ್ದಿ, ಗದಗ**

ಗುರು-ಶಿಷ್ಯ ಪರಂಪರೆ ಅತ್ಯಂತ ಮಹತ್ವದ್ದು. ಮಕ್ಕಳನ್ನು ತಿದ್ದಿ-ತೀಡಿ, ಗದರಿಸಿ ಕಲಿಸುವುದೇ ಪ್ರಾಥಮಿಕ ಶಾಲೆಯಲ್ಲಿ. ಇಲ್ಲಿ ಹಾಕಿಕೊಟ್ಟ ಶಿಕ್ಷಣ ಮಕ್ಕಳಿಗೆ ಬುನಾದಿಯಾಗಿ, ಮುಂದೆ ಅವರು ಸಮರ್ಥ ವ್ಯಕ್ತಿಗಳಾಗಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡುವಂತಾಗಲಿದೆ ಎಂದು ಮುಕ್ಕಣ್ಣೇಶ್ವರ ಮಠದ ಶ್ರೀ ಶಂಕರಾನಂದ ಸ್ವಾಮಿಗಳು ನುಡಿದರು.

ಇಲ್ಲಿನ ದಿ ಮಾಡೆಲ್ (ಶ್ರೀ ಸಿ.ಎಸ್ ಪಾಟೀಲ) ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧ್ಯಾಪಕ



ಡಾ. ಆರ್.ಎಲ್ ಹಂಸನೂರ, ಪತ್ರಕರ್ತ ರಘೋತ್ತಮ ಕೊಪ್ಪರ, ಶಿಕ್ಷಕರಾದ ಎಚ್.ಪಿ ಹಿರೇಮಠ, ಎಸ್.ಎಸ್ ಗುಜಮಾಗಡಿ, ಎಸ್.ಎ ಜಮಾದಾರ, ಎಸ್.ಎಂ ತಳವಾರರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಕಾಶ ಮಲಕಶೆಟ್ಟಿ, ಈರಣ್ಣ ಪತ್ತಾರ, ಗುರುರಾಜ ಕುಲಕರ್ಣಿ, ಗೋವಿಂದ ಶಿರಹಟ್ಟಿ, ಶ್ರೀಧರ ಪಾಟೀಲ, ವಿಜಯಲಕ್ಷ್ಮೀ ಮೆಣಸಿನಕಾಯಿ, ಬಸಮ್ಮಾ ವೆಂಕಟಾಪೂರ, ಸವಿತಾ ಕುಲಕರ್ಣಿ, ದ್ರಾಕ್ಷಾಯಣಿ ಗೌಡರ, ಭಾಸ್ಕರ ಶಿಂಧೆ ಮೊದಲಾದವರು ತಮ್ಮ ಬಾಲ್ಯದ ವಿದ್ಯಾರ್ಥಿ ಜೀವನದ ಮೆಲಕು ಹಾಕಿದರು.

> ಶಿಕ್ಷಕರಾದ ಎನ್.ಎಂ ಪಾಟೀಲ, ಎಂ.ಬಿ ಹೋಳಿ, ಎಸ್.ಎ ಜಮಾದಾರ, ಜಿ.ಕೆ ಸವದಿ, ಎಚ್.ಪಿ ಹಿರೇಮಠ, ಎಸ್.ಎಸ್ ಗುಜಮಾಗಡಿ, ಬಿ.ಜಿ ಮೆಣಸಗಿ, ಆರ್.ಎಲ್ ಹಂಸನೂರ, ಎ.ಎನ್ ಮಾಕಾಪೂರ, ಬಿ.ವ್ಹಿ ಹೊರಪೇಟಿ, ವ್ಹಿ.ಎಲ್ ನಾವಳ್ಳಿ, ಆರ್. ಕೆ ಜಮಖಂಡಿ, ಎಸ್.ಎಂ ತಳವಾರ, ಜಿ.ಆಯ್ ಚನ್ನಪ್ಪನವರ ಅವರನ್ನು ಶ್ರೀ ಶಂಕರಾನಂದ ಸ್ವಾಮಿಗಳು ಸನ್ಮಾನಿಸಿದರು.

ವಿದ್ಯಾರ್ಥಿಗಳಾದ ಗುರುರಾಜ ಕುಲಕರ್ಣಿ, ಗೋವಿಂದ ಶಿರಹಟ್ಟಿ, ಶಶಿಧರ ಪಾಟೀಲ, ದ್ರಾಕ್ಷಾಯಿಣಿ ಗೌಡರ, ಡಾ. ಜ್ಯೋತಿ ಕಟ್ಟಿ, ಭಾಸ್ಕರ ಶಿಂಧೆ, ಮಂಜುನಾಥ ಅರವಟಗಿ, ಈರಣ್ಣ ಪತ್ತಾರ, ಬಸಮ್ಮಾ ಭಂಡಾರಿ, ಗಂಗೂಬಾಯಿ ಗುಡ್ಡದ, ಸಿದ್ಧಲಿಂಗ ದೇಸಾಯಿಪಟ್ಟಿ, ಸವಿತಾ ಕುಲಕರ್ಣಿ, ವಿಜಯಲಕ್ಷ್ಮೀ ಮೆಣಸಿನಕಾಯಿ, ಬಸವರಾಜ ಜಡಿಯನ್ನವರ, ಶಿವಾನಂದ ಹವಳಪ್ಪನವರ, ವೀರೇಶ ಕುರ್ತಕೋಟಿ, ರುದ್ರಗೌಡ ಪಾಟೀಲ, ಶ್ರೀಕಾಂತ ಹೂಗಾರ, ಸುಧೀರಸಿಂಗ ಜಮಾದಾರ, ನಾಗರಾಜ ಕರಿಬಿಷ್ಠಿ, ಸಿದ್ಧಲಿಂಗೇಶ ಹಿರೇಮಠ, ಪ್ರಕಾಶ ಮಲಕಶೆಟ್ಟಿ, ಪ್ರವೀಣ ಸವದಿ, ಸುಲೇಮಾನ ನಮಾಜಿ, ನಿಂಗಪ್ಪ ಟೆರಗುಂಟಿ, ಮಂಜುನಾಥ ರಕ್ಕಸಗಿ, ಸತೀಶ ಅಣ್ಣಿಗೇರಿ, ಮಂಜುಳಾ ಸಜ್ಜನರ, ರಶ್ಮಿ ಲಕ್ಷ್ಮೇಶ್ವರಮಠ, ಶಂಭುಲಿಂಗ ಮೂಗಂಡದಮಠ, ಶಂಕರ ಮಾಳಶೆಟ್ಟಿ, ಗಂಗಾಧರ ಕುಂಟೆಪ್ಪನವರ, ಮೊದಲಾದವರು ಪಾಲ್ಗೊಂಡಿದ್ದರು.

## ಸಡಗರದ ಶ್ರೀ ಚೌಕಿ ಬಸವೇಶ್ವರ ರಥೋತ್ಸವ



**■ವಿಜಯಸಾಕ್ಷಿ ಸುದ್ದಿ, ಗದಗ**

ಸಮೀಪದ ತಿಮ್ಮಾಪೂರ ಗ್ರಾಮದ ಶ್ರೀ ಚೌಕಿ ಬಸವೇಶ್ವರ ಜಾತ್ರಾ ಮಹೋತ್ಸವ ಶ್ರಾವಣ ಮಾಸದ ಕಡೆಯ ಸೋಮವಾರ ಸಂಜೆ ಅತ್ಯಂತ ಸಡಗರ ಸಂಭ್ರಮದಿಂದ ನೂರಾರು ಭಕ್ತರ ಉಪಸ್ಥಿತಿಯಲ್ಲಿ ನೆರವೇರಿತು.

ಕಳೆದ 45 ವರ್ಷಗಳಿಂದ ಕಾರಣಾಂತರಗಳಿಂದ ನಿಂತು ಹೋಗಿದ್ದ ಜಾತ್ರೆ, ಈ ವರ್ಷ ಈಶ್ವರ ಹಾಗೂ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, 48 ದಿನಗಳ ಕಾಲ ನಿತ್ಯ ಪಂಚಾಮೃತ ಅಭಿಷೇಕ, ಪೂಜೆಗಳನ್ನು ನೆರವೇರಿಸುವ ಮೂಲಕ ಮತ್ತೆ ಜಾತ್ರಾ ಮಹೋತ್ಸವವನ್ನು ನೆರವೇರಿಸಲಾಯಿತು.

ರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಸಂದರ್ಭದಲ್ಲಿ ಭಕ್ತರು ಉತ್ತತ್ತಿ, ಬಾಳೆ ಹಣ್ಣು, ಫಲಪುಷ್ಪಗಳನ್ನು ರಥದ ಮೇಲೆ ಎಸೆಯುವದರ ಮೂಲಕ ಹರಕೆ ಸಮರ್ಪಿಸಿದರು. ರಥವು ಶ್ರೀ ಚನ್ನಬಸವೇಶ್ವರ ದೇವಸ್ಥಾನ ಪಾದಗಟ್ಟಿ ತಲುಪಿದ ನಂತರ ಭಕ್ತರು ಆಕಾಶದೆತ್ತರಕ್ಕೆ ಹಾರುವ ಸಿಡಿಮದ್ದುಗಳ ಪ್ರದರ್ಶನವನ್ನು ವೀಕ್ಷಿಸಿ ಸಂಭ್ರಮಿಸಿದರು.

### ತಹಸೀಲ್ದಾರರ ಅನುಪಸ್ಥಿತಿಯಲ್ಲಿ ಪೂರ್ವಭಾವಿ ಸಭೆ | ವಿರೋಧಗಳ ನಡುವೆ ಸಭೆ ಮುಂದೂಡಿಕೆ

# ಸೆ.15ರಂದು ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ರೋಣ**

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ನಿಮಿತ್ತ ಸೆ.15ರಂದು ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಬೇಕು ಎಂದು ತಾ.ಪಂ ಇಒ ರವಿ ಎ.ಎನ್ ಹೇಳಿದರು.

ಅವರು ಮಂಗಳವಾರ ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಜರುಗಿದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಹಾಗೂ ಸಂವಿಧಾನದ ಮಹತ್ವವನ್ನು ತಿಳಿಸುವ ಮಹತ್ವದ ಕಾರ್ಯಕ್ರಮ ಇದಾಗಿದೆ. ತಾಲೂಕಿನ ಎಲ್ಲ ಇಲಾಖೆಗಳಲ್ಲಿ, ಶಾಲಾ ಕಾಲೇಜುಗಳೂ ಸೇರಿದಂತೆ ಸಂಘ-ಸಂಸ್ಥೆಗಳು ಸಹ ಸಂವಿಧಾನ ಪೀಠಿಕೆ ಓದುವ ಕಾರ್ಯವನ್ನು ಮಾಡಬೇಕು. ಮುಖ್ಯವಾಗಿ ಸೆ.15ರಂದು ಶಾಸಕ ಜಿ.ಎಸ್ ಪಾಟೀಲರ ನೇತೃತ್ವದಲ್ಲಿ ತಾಲೂಕಾ ಪಂಚಾಯಿತಿಯಲ್ಲಿ ಕಾ ಂ ರ್ು ್ ರ ಕ್ ್ರ ವ್ ುವ ನ್ ್ನ ಹಮ್ಮಿಕೊಂಡಿದ್ದು, ಸಾರ್ವಜನಿಕರು ಭಾಗಿಯಾಗಬೇಕು ಎಂದರು.



**ತಹಸೀಲ್ದಾರರ ಅನುಪಸ್ಥಿತಿ:** ಡಾ. ಬಿ.ಆರ್ ಅಂಬೇಡ್ಕರ ಜಯಂತಿ ಸೇರಿದಂತೆ ದಲಿತರಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ತಹಸೀಲ್ದಾರರು ಗೈರಾಗುತ್ತಿರುವುದು ಖಂಡನೀಯವಾಗಿದ್ದು, ಈ ಸಭೆಗೂ ಕೂಡ ಅವರು ಗೈರಾಗಿದ್ದಾರೆ. ಹೀಗಾಗಿ, ಅವರ ಅಧ್ಯಕ್ಷತೆಯಲ್ಲಿಯೇ ಪೂರ್ವಭಾವಿ ಸಭೆಯನ್ನು ನಡೆಸಬೇಕು. ಕಾರ್ಯಕ್ರಮವನ್ನು ತಾಲೂಕಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಬೇಕು ಎಂದು ದಲಿತ ಮುಖಂಡರು ಆಗ್ರಹಿಸಿದರು. ಇದರಿಂದ ವಿಚಲಿತರಾದ ಇಒ ರವಿಯವರು, ತಹಸೀಲ್ದಾರರು ತಿಳಿಸಿದಂತೆ, ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆ ನಡೆಸಲಾಗಿದೆ ಎಂದರೂ ಒಪ್ಪದ ಮುಖಂಡರು, ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಸಭೆ ನಡೆಸಬೇಕು ಎಂದು ಒತ್ತಾಯಿಸುತ್ತಿದ್ದಂತೆ ಸಭೆಯನ್ನು ಸೆ.13ಕ್ಕೆ ಮುಂದೂಡಲಾಯಿತು.

ಮುಖಂಡರಾದ ಬಸವರಾಜ ಜಗ್ಗಲ, ಮೌನೇಶ ಹಾದಿಮನಿ, ಪ್ರಕಾಶ ಹೊಸಳ್ಳಿ, ಬಸವಂತಪ್ಪ ತಳವಾರ ಸೇರಿದಂತೆ ಅನೇಕ ಮುಖಂಡರು, ಅಧಿಕಾರಿಗಳು ಉಪಸ್ಥಿತರಿದ್ದರು.

> ತಹಸೀಲ್ದಾರರು ಚುನಾವಣೆ ಸಭೆಯಲ್ಲಿ ಪಾಲ್ಗೊಳ್ಳಬೇಕಿರುವುದರಿಂದ, ನಿಮ್ಮ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಎಂದು ದೂರವಾಣಿ ಮೂಲಕ ತಿಳಿಸಿದ ಹಿನ್ನೆಲೆಯಲ್ಲಿ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದ್ದೆ. ಇನ್ನು ಮುಂದೆ ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಜರುಗುವ ಸಭೆಗಳಿಗೆ ನಾನು ಅಧ್ಯಕ್ಷತೆಯನ್ನು ವಹಿಸುವುದಿಲ್ಲ. ಇದಕ್ಕೆ ನಾನು ಬದ್ಧ.
>
> – ರವಿ ಎ.ಎನ್.
> ತಾಲೂಕು ಪಂಚಾಯಿತಿ ಇಒ.

ಸರಕಾರದ ಆದೇಶದಂತೆ ಸಮಿತಿಗಳನ್ನು ರಚಿಸಬೇಕು. ಸಮಿತಿಯ ಪದಾಧಿಕಾರಿಗಳನ್ನು ಆಹ್ವಾನಿಸಬೇಕು. ಆದರೆ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಇದ್ಯಾವುದನ್ನೂ ಮಾಡದೆ, ತರಾತುರಿಯಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಿದ್ದು ಈ ಘಟನೆಗೆ ಮುಖ್ಯ ಕಾರಣವಾಗಿದೆ ಎಂಬ ಮಾತುಗಳು ಸಹ ಸಭೆಯಲ್ಲಿ ಕೇಳಿಬಂದವು.

# ಶ್ರೀಕ್ಷೇತ್ರವಾಗುವತ್ತ ಮುಕ್ತಿಮಂದಿರ

▸▸ಮೊದಲನೇ ಪುಟದಿಂದ



1 ಶಿವಲಿಂಗ ಸೇವೆಗೆ 7001 ರೂ ನಿಗದಿಪಡಿಸಲಾಗಿದ್ದು ತ್ರಿಕೋಟಿ ಶಿವಲಿಂಗ ಸ್ಥಾಪನೆಯ ಪುಣ್ಯ ಕಾರ್ಯಕ್ಕಾಗಿ ನಾಡಿನ ಧರ್ಮಾಭಿಮಾನಿಗಳು, ಭಕ್ತರು, ದಾನಿಗಳು ಕೈಜೋಡಿಸಬೇಕು. ಈ ಮಹೋನ್ನತ ಕಾರ್ಯ ಸಾಕಾರಗೊಳ್ಳಲು ನಾಡಿನ ಭಕ್ತರ, ಧರ್ಮಾಭಿಮಾನಿಗಳ ಸಹಾಯ ಕಾರಣವಾಗಿದೆ. ಶಿವಲಿಂಗ ಪ್ರತಿಷ್ಠಾಪನೆ ಪೂರ್ಣಗೊಂಡ ಬಳಿಕ ಇದೊಂದು ಅವಿಮುಕ್ತ ಕ್ಷೇತ್ರವಾಗಲಿದೆ. ಧರ್ಮ ಕ್ಷೇತ್ರದಲ್ಲಿ ನಿತ್ಯ ತ್ರಿವಿಧ ದಾಸೋಹ ಸೇವೆ ಪ್ರಾರಂಭಗೊಂಡು, ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿ ಕಂಗೊಳಿಸಲಿದೆ. ಬುಧವಾರ ನಡೆಯುವ ಭೂಮಿಪೂಜೆ ಕಾರ್ಯಕ್ರಮಕ್ಕೆ ಎಲ್ಲರೂ ಜಾತಿ, ಧರ್ಮ, ರಾಜಕೀಯ ಪಕ್ಷಬೇಧ ಮರೆತು ಪಾಲ್ಗೊಳ್ಳಬೇಕು ಎಂದು ನೊಣವಿನಕೇರಿ ಕಾಡಸಿದ್ಧೇಶ್ವರಮಠ ಡಾ. ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮಿಗಳು ಮತ್ತು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ತ್ರಿಕೋಟಿ ಶಿವಲಿಂಗ ಸೇವೆ ಮಾಡಲಿಚ್ಛಿಸುವ ಭಕ್ತಾದಿಗಳು ಶ್ರೀ ಜ.ವೀರಗಂಗಾಧರ ತ್ರಿಕೋಟಿ ಶಿವಲಿಂಗ(ಜೆವಿಜಿಎಸ್‌ಟಿಎಸ್) ಟ್ರಸ್ಟ್(ರಿ), ಲಕ್ಷ್ಮೇಶ್ವರ(ಮುಕ್ತಿಮಂದಿರ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ-ಲಕ್ಷ್ಮೇಶ್ವರ ಜಿ, ಗದಗ. ಖಾತೆ ಸಂಖ್ಯೆ- 11139847629, ಐಎಫ್‌ಎಸ್‌ಸಿ ಕೋಡ್-ಖಃಖಔ0002229 ಮೂಲಕ ಕಾಣಿಕೆ ಸಲ್ಲಿಸಬಹುದಾಗಿದ್ದು, ಮಾಹಿತಿಗಾಗಿ- 9448165344 ಸಂಪರ್ಕಿಸುವಂತೆ ಕೋರಲಾಗಿದೆ.

ಈ ಸಂಕಲ್ಪವನ್ನು ಸಿದ್ಧಿಗೊಳಿಸುವ ಕಾರ್ಯ ರಂಭಾಪುರಿ, ಕಲಾದಗಿ, ಮುಕ್ತಿಮಂದಿರ, ನೊಣವಿಕೇರಿ ಶ್ರೀಗಳ ಇಚ್ಛಾಶಕ್ತಿಯಿಂದ ಇದೀಗ ಸಾಕಾರಗೊಳ್ಳುತ್ತಿರುವುದು ಭಕ್ತ ಕುಲಕೋಟಿಗೆ ಹರ್ಷ ತಂದಿದೆ.

ಲಿಂ. ಶ್ರೀಗಳ ತಪೋಬಲ, ದೈವೀಶಕ್ತಿ, ಪವಾಡ, ಮಹಿಮೆಗೆ ಮೆಚ್ಚಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರಂತಹ ಮಹಾನ್ ನಾಯಕರೂ ಸೇರಿ ನಾಡಿನಾದ್ಯಂತ ಭಕ್ತಗಣ ಶ್ರೀಗಳ ದರ್ಶನಾಶೀವಾದಕ್ಕೆ ಬರುತ್ತಿದ್ದರು. ಕ್ಷೇತ್ರದಲ್ಲಿ 1942ರಲ್ಲಿ ಸರ್ವ ಧರ್ಮಗಳ ಸ್ಥಾಪನಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ, ವೀರಶೈವ ಗುರುವರ್ಗದ ಸಮಾವೇಶ, 108 ತೇರು, 1008 ಮಂಟಪ ಪೂಜೆ, ಸೋಮಸಾಗರ ನಿರ್ಮಾಣ, ಸೋಮೇಶ್ವರ ದೇವಸ್ಥಾನಕ್ಕೆ ಕಳಸಾರೋಹಣ, ಪ್ರವಚನ, ದಸರಾ ದರ್ಬಾರು, ಪಂಚಪೀಠಾಧೀಶ್ವರರ ಸಮಾಗಮದೊಂದಿಗೆ ಧರ್ಮ ಜಾಗೃತಿಯ ಮೂಲಕ ನಾಡಿನ ಭಕ್ತ ಸಂಕುಲದ ನಡೆದಾಡುವ ದೇವರೇ ಆಗಿದ್ದರು. ಮುಂದೊಂದು ದಿನ ಈ ನೆಲ ಪವಿತ್ರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆಯಲಿದೆ ಎಂಬ ಶ್ರೀಗುರು ಗೋವಿಂದಭಟ್ಟರ ಮತ್ತು ಶಿಶುನಾಳ ಶರೀಪರ ದಿವ್ಯದೃಷ್ಟಿಯ ನುಡಿಗಳು ಇಂದು ದಿಟವಾಗುತ್ತಿವೆ.

# ಪೌಷ್ಟಿಕ ಆಹಾರ ಸೇವನೆ ಅತ್ಯಗತ್ಯ

**■ವಿಜಯಸಾಕ್ಷಿ ಸುದ್ದಿ, ನರಗುಂದ**

ಶಿಶು ಅಭಿವೃದ್ಧಿ ಯೋಜನೆ ನರಗುಂದ ವತಿಯಿಂದ ಪೋಷಣ್ ಮಾಸಾಚರಣೆ ಕಾರ್ಯಕ್ರಮವನ್ನು ಇಲ್ಲಿನ ಸೋಮಾಪೂರ ಓಣಿಯ ಶ್ರೀ ಶಿವಾನಂದರ ಮಠದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುರಸಭೆ ಸದಸ್ಯ ಚಂದ್ರಗೌಡ ಪಾಟೀಲ ವಹಿಸಿದ್ದರು. ಕಾರ್ಯಕ್ರಮ ಸಂಯೋಜಕ ಮಂಜುನಾಥ ಗುಗ್ಗರಿ ಮಾತನಾಡಿ, ಪೌಷ್ಟಿಕ ಆಹಾರ ಪ್ರಸ್ತುತ ದಿನಗಳಲ್ಲಿ ಅತೀ ಅವಶ್ಯಕವಾಗಿದೆ. ಕಾಲ ಕಾಲಕ್ಕೆ ತಮ್ಮ ಮಕ್ಕಳ ಎತ್ತರ, ತೂಕ ಪರೀಕ್ಷಿಸುವದು, ಅಪೌಷ್ಟಿಕತೆ ಕಂಡುಬಂದಲ್ಲಿ ಪೌಷ್ಟಿಕ ಪುನರ್ವಸತಿ ಕೇಂದ್ರಕ್ಕೆ ದಾಖಲಿಸುವದು ಸೂಕ್ತ ಎಂದು ತಿಳಿಸಿದರು.

ಮೇಲ್ವಿಚಾರಕಿ ಶಕುಂತಲಾ ಗಣಿ ಮಾತನಾಡಿ, ಸೆಪ್ಟೆಂಬರ್ ತಿಂಗಳ ಪರ್ಯಂತ ಈ ಕಾರ್ಯಕ್ರಮ ವಿವಿಧ ಶಾಲೆಗಳಲ್ಲಿ ಜರುಗಲಿದೆ ಎಂದು ತಿಳಿಸಿ, ಸಿರಿಧಾನ್ಯಗಳ ಸೇವನೆಯಿಂದಾಗುವ ಪ್ರಯೋಜನ, ಪ್ರೋಟೀನ್, ಕಾರ್ಬೋಹೈಡ್ರೇಟ್, ಕೊಬ್ಬು, ಜೀವಸತ್ವಗಳು, ಖನಿಜಗಳು, ನೀರು, ಫೈಬರ್ ಸಿಗುವ ಆಹಾರ ಬಗೆಗಳ ಬಗ್ಗೆ ತಿಳಿಸಿದರು.



ಓಣಿಯ ಮುಖಂಡರಾದ ಮಂಜು ಮೆಣಸಗಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಬೇಟಿ ಬಚಾವೋ ಬೇಟಿ ಪಡಾವೋ, ಪೋಷಣ್ ಅಭಿಯಾನ, ಪ್ರಧಾನಮಂತ್ರಿ ಮಾತೃ ವಂದನಾ ಇಂತಹ ಹಲವಾರು ಯೋಜನೆಗಳು ಮಹಿಳೆ ಮತ್ತು ಮಕ್ಕಳಿಗೆ ಪೂರಕವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಕವಿತಾ ಅರ್ಭಾಣದ, ಶಿಕ್ಷಕರಾದ ಟಿ.ಬಿ ಹಿರೇಮನಿ, ಆರೋಗ್ಯ ಇಲಾಖೆಯ ಎಸ್.ಎಸ್ ಅಂಗಡಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಉಪಸ್ಥಿತರಿದ್ದರು.

# ಕ್ರೀಡಾಳುಗಳು ನಿರ್ಣಾಯಕರ ತೀರ್ಪುಗಳನ್ನು ಗೌರವಿಸಿ

▸▸ಮೊದಲನೇ ಪುಟದಿಂದ

ಮಾತನಾಡಿ, ತಾಲೂಕಿನ 14 ಗ್ರಾ.ಪಂ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿರಹಟ್ಟಿ ಶಹರದ ಸುಮಾರು 600 ಕ್ರೀಡಾಪಟುಗಳು ವಿದ್ಯಾರ್ಥಿಗಳು 2 ದಿನಗಳ ಕಾಲ ನಡೆಯುವ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಇವರೆಲ್ಲರಿಗೂ ಸಹ ಇಲಾಖೆ ವತಿಯಿಂದ ಅಗತ್ಯ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ ಎಂದರು.

ತಾ.ಪಂ ಇಓ ಡಾ. ಎನ್.ಎಚ್ ಓಲೇಕಾರ, ಸಹಾಯಕ ನಿರ್ದೇಶಕ ಶರಣು ಗೋಗೇರಿ, ಪ.ಪಂ ಸದಸ್ಯ ಸಂದೀಪ ಕಪ್ಪತ್ತನವರ, ಹೊನ್ನಪ್ಪ ಶಿರಹಟ್ಟಿ, ಫಕ್ಕೀರೇಶ ರಟ್ಟಿಹಳ್ಳಿ, ರಾಮಣ್ಣ ಕಂಬಳಿ, ಪರಶುರಾಮ ಡೊಂಕಬಳ್ಳಿ ಮುಂತಾದವರು ಉಪಸ್ಥಿತರಿದ್ದರು.

# ಸಿರಿಧಾನ್ಯ-ಉತ್ತರ ಕರ್ನಾಟಕ ದೇಸಿ ಅಡುಗೆ ಸ್ಪರ್ಧೆ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಏರ್ಪಡಿಸಿರುವ 'ಗದಗ ಉತ್ಸವ'ದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕವು ಬುಧವಾರ ಸಿರಿಧಾನ್ಯಗಳಲ್ಲಿ ಸಿಹಿ ಮತ್ತು ಖಾರ-ಉತ್ತರ ಕರ್ನಾಟಕ ದೇಸಿ ಅಡುಗೆ ಸ್ಪರ್ಧೆ ಏರ್ಪಡಿಸಿದೆ ಎಂದು ಮಹಿಳಾ ಘಟಕ ಅಧ್ಯಕ್ಷೆ ಜಯಶ್ರೀ ತಾತನಗೌಡ ಪಾಟೀಲ ತಿಳಿಸಿದ್ದಾರೆ.

12 ಗಂಟೆಗೆ ನಡೆಯಲಿರುವ ಸ್ಪರ್ಧೆಯ ನಿರ್ಣಾಯಕರಾಗಿ ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ, ದೇಸಿ ಅಡುಗೆ ಪರಿಣಿತರಾದ ಮಲ್ಲಾಪೂರದ ಕಸ್ತೂರಿ ದಾನಪ್ಪಗೌಡ್ರ ಆಗಮಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಪಾಟೀಲ ವಹಿಸುವರು.

ಸಿರಿಧಾನ್ಯದಿಂದ ಸಿದ್ಧಪಡಿಸಿದ ಖಾರದ ಮತ್ತು ಸಿಹಿ ಪದಾರ್ಥ ಈ ಎರಡೂ ವಿಭಾಗದಿಂದ ಸ್ಪರ್ಧೆಗೆ ತಲಾ ಮೂರು ಆಯ್ಕೆಗಳನ್ನು ಮಾಡಲಾಗುವದು. ದೇಸಿ ಧಾನ್ಯದಿಂದ ಸಿದ್ಧಪಡಿಸಿದ ಖಾರದ ಹಾಗೂ ಸಿಹಿ ಪದಾರ್ಥ ಇದರಲ್ಲೂ ಸಹ ಎರಡೂ ವಿಭಾಗದಿಂದ ತಲಾ ಮೂರು ಆಯ್ಕೆಗಳನ್ನು ಮಾಡಲಾಗುವದು. ಒಟ್ಟು 12 ಆಕರ್ಷಕ ಬಹುಮಾನಗಳಿವೆ.

ಸ್ಪರ್ಧೆಯಲ್ಲಿ ಭಾಗಹಿಸುವ ಮಹಿಳೆಯರಿಗೆ ವಯಸ್ಸಿನ ನಿರ್ಬಂಧವಿಲ್ಲ. ಅಡುಗೆಯನ್ನು ತಮ್ಮ ಮನೆಯಲ್ಲಿ ಸಿದ್ಧಪಡಿಸಿಕೊಂಡು ಕಲ್ಯಾಣ ಮಂಟಪಕ್ಕೆ ತರಬೇಕು. ಅಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುವದು. ಮಾಹಿತಿಗಾಗಿ ಸುವರ್ಣಾ ಮದರಿಮಠ ಮೊ-9886615359, ಜಯಶ್ರೀ ಪಾಟೀಲ ಮೊ-9902598469 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಮಕ್ಕಳಿಗೆ ಸಂಸ್ಕಾರ ಮುಖ್ಯ: ಮಹೇಶ ಲಿಂಬಯ್ಯಸ್ವಾಮಿಮಠ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಿದ್ಯೆಯೊಂದಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಬೇಕು. ಸಂಸ್ಕಾರವಂತ ಮಕ್ಕಳು ಈ ದೇಶದ ಆಸ್ತಿ ಆಗಬಲ್ಲರು. ವಿದ್ಯಾರ್ಥಿ ಜೀವನದಲ್ಲಿ ಮಕ್ಕಳು ಕಷ್ಟಪಟ್ಟು ಶಿಕ್ಷಣ ಪಡೆಯಬೇಕು. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕಗಳಲ್ಲೂ ಭಾಗವಹಿಸುವ ಮೂಲಕ ತಮ್ಮ ಜ್ಞಾನದ ಪರಿಧಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಉದ್ಯಮಿ ಮಹೇಶ ಲಿಂಬಯ್ಯಸ್ವಾಮಿಮಠ ಹೇಳಿದರು.

ಶ್ರಾವಣ ಮಾಸದ ಅಂಗವಾಗಿ ಇಲ್ಲಿನ ತಾಯಿ ಪಾರ್ವತಿ ಮಕ್ಕಳ ಬಳಗದ ಸಭಾಭವನದಲ್ಲಿ ಆರಂಭವಾಗಿರುವ ಸಿದ್ಧಾರೂಢರ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಮಂಗಳವಾರ ಜರುಗಿದ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ತಾಲ್ಲೂಕು ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಗರಾಜ ಹಣಗಿ ಅವರು ತಿಂಥಿಣಿ ಮೌನೇಶ್ವರ ಕುರಿತು ಉಪನ್ಯಾಸ ನೀಡಿ, ಈ ನಾಡಿಗೆ ಶರಣರ ಕೊಡುಗೆ ದೊಡ್ಡದು. ಅದರಲ್ಲೂ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಶರಣ-ಶರಣೆಯರು ತಮ್ಮ ಪ್ರಭಾವ ಬೀರಿದ್ದಾರೆ. ವರವಿ ಮೌನೇಶ್ವರರೂ ಕೂಡ ಓರ್ವ ಶರಣರಾಗಿದ್ದು, ನೂರಾರು ವಚನಗಳನ್ನು ರಚಿಸುವ ಮೂಲಕ ಶರಣ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಶಾರಕ್ಕ, ಉಪನ್ಯಾಸಕಿ ಸರಸ್ವತಿ ಹುಲ್ಲಣ್ಣವರ, ಎ.ಎನ್ ನಾವಿ ಮುಂತಾದವರಿದ್ದರು. ಶಿಕ್ಷಕ ಪ್ರಭುಗೌಡ ಎಕ್ಕಿಕೊಪ್ಪ ಅವರು ಸಿದ್ಧಾರೂಢದ ಕುರಿತು ಪುರಾಣ ಪ್ರವಚನ ನೆರವೇರಿಸಿದರು.

### ಮಹಾರುದ್ರಾಭಿಷೇಕ, ಎಲೆ ಪೂಜೆಯೊಂದಿಗೆ ಅಗ್ನಿಪ್ರವೇಶ ಕಾರ್ಯಕ್ರಮ

# ವೈಭವದ ವೀರಭದ್ರೇಶ್ವರ ಪಾಲಕಿ ಉತ್ಸವ



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಪಟ್ಟಣದ ಬಣಗಾರ ಓಣಿಯ ಜಡೇಶಂಕರಲಿಂಗೇಶ್ವರ ಟ್ರಸ್ಟ್ ಕಮಿಟಿ ಹಾಗೂ ವೀರಶೈವ ಬಣಗಾರ ಸಮಾಜದಿಂದವೀರಭದ್ರೇಶ್ವರ ಪಾಲಕಿ ಉತ್ಸವ, ಅಗ್ನಿಪ್ರವೇಶ ಸಮಾರಂಭ ಮಂಗಳವಾರ ವೈಭವದಿಂದ ನಡೆಯಿತು.

ಮಂಗಳವಾರ ಬೆಳಿಗ್ಗೆ ಬಡಾವಣೆಯಲ್ಲಿನ ಜಡೇಶಂಕರಲಿಂಗ, ವೀರಭದ್ರೇಶ್ವರ ಹಾಗೂ ಕಾಳಿಕಾದೇವಿಗೆ ಮಹಾರುದ್ರಾಭಿಷೇಕ ಮತ್ತು ಎಲೆ ಪೂಜೆಯೊಂದಿಗೆ ಅಗ್ನಿಪ್ರವೇಶ ಕಾರ್ಯಕ್ರಮ ನಡೆಯಿತು. ಬಳಿಕ ವಿಜಯ ನಗರ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಸೋಗಿ ಗ್ರಾಮದ ವೀರಭದ್ರೇಶ್ವರ ವೀರಗಾಸೆ ಜಾನಪದ ಕಲಾ ಸಂಘದ ಪುರವಂತರ ತಂಡದಿಂದ ವಾದ್ಯ, ವೀರಗಾಸೆ ನೃತ್ಯ ಸೇರಿ ಶ್ಯಾಂಬಾಳು, ಕರಡಿಮಜಲು ಮತ್ತು ವಿವಿಧ ವಾದ್ಯ ಮೇಳಗಳೊಂದಿಗೆ ಮುತ್ತೈದೆಯರು ಹಾಗೂ ಸಕಲ ಸದ್ಭಕ್ತರೊಡಗೂಡಿ ವೀರಭದ್ರಶ್ವರ ಪಾಲಕಿ ಉತ್ಸವವು ಪಟ್ಟಣದ ಬಸವೇಶ್ವರ ವೃತ್ತ, ಮೈಸೂರು ಮಠ, ಅಂಬೇಡ್ಕರ ವೃತ್ತ, ದುರ್ಗಾ ವೃತ್ತದಿಂದ ಹಿರೇಬಜಾರ, ಕೊಳ್ಳಿಯವರ ಕತ್ರಿ ಮಾರ್ಗವಾಗಿ ಮರಳಿ ದೇವಸ್ಥಾನ ತಲುಪಿತು. ಬಣಗಾರ ಸಮಾಜದ ಅಧ್ಯಕ್ಷ ಪಾಲಾಕ್ಷಪ್ಪ ಕೊಡಕೇಲ್, ಶೇಖರಪ್ಪ ಚನ್ನಿ, ಶೇಖಣ್ಣ ಇಟಗಿ, ಈಶಪ್ಪ ಇಟಗಿ, ಅಮರೇಶಪ್ಪ ಬೂದಿಹಾಳ, ಶರಣಪ್ಪ ರೇವಡಿ, ಕಳಕೇಶ ಚನ್ನಿ, ಬಸವರಾಜ ಚನ್ನಿ, ಮಹೇಶ ಇಟಗಿ, ಸಿದ್ದು ಗೊಂಗಡಶೆಟ್ಟಿಮಠ, ಶೇಖಪ್ಪ ಕಾತರಕಿ, ಶಂಕರ ಚನ್ನಿ, ರವಿ ಇಟಗಿ, ವಿಶಾಲ ಇಟಗಿ, ಮಂಜುನಾಥ ಚನ್ನಿ, ಸಂಗಮ್ಮ ಬಾವಿಕಟ್ಟಿ, ಲಕ್ಷ್ಮೀ ಬಾರಿಮನಿ, ಸುಲೋಚನಾ ಕೊಡಕೇಲ್, ಪ್ರೇಮಾ ಚನ್ನಿ, ಅನಿತಾ ಚನ್ನಿ, ಗಿರಿಜಾ ಇಟಗಿ, ರೂಪಾ ಚನ್ನಿ, ಚೇತನಾ ಚನ್ನಿ ಮುಂತಾದವರಿದ್ದರು.

ಈ ಸಂದರ್ಭದಲ್ಲಿ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್ ಪಾಟೀಲ, ಗಜೇಂದ್ರಗಡ-ಉಣಚಗೇರಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಸಿದ್ದಣ್ಣ ಬಂಡಿ, ತರುಣ ಸಂಘದ ಅಧ್ಯಕ್ಷ ಅಪ್ಪು ಮತ್ತಿಕಟ್ಟಿ, ಪುರಸಭೆ ಸದಸ್ಯ ಶಿವರಾಜ ಘೋರ್ಪಡೆ ಅವರನ್ನು ಸನ್ಮಾನಿಸಲಾಯಿತು. ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ನಡೆಯಿತು.

# 'ಗದಗ ಉತ್ಸವ' ಇಂದು ಮುಕ್ತಾಯ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ 'ಗದಗ ಉತ್ಸವ'ದಲ್ಲಿ ಬುಧವಾರ ಸಂಜೆ 6 ಗಂಟೆಗೆ 'ಶ್ರೇಷ್ಠ ಮಳಿಗೆ' ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯ ನಿಯೋಜಿತ ಅಧ್ಯಕ್ಷ ರಮೇಶಚಂದ್ರ ಲಹೋಟಿ ಹಾಗೂ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಭಾರ ಜಂಟಿ ನಿರ್ದೇಶಕ ಶಿವಪುತ್ರಪ್ಪ ಹರಿಜನ, ಗದಗ ಜಿ.ಪಂ (ಗ್ರಾ. ಕೈ) ಉಪನಿರ್ದೇಶಕ ಎಚ್.ಬಿ ಪಾಟೀಲ, ಬಿ.ಮಹೇಶ, ವೀರಯ್ಯಸ್ವಾಮಿ ಹಿರೇಮಠ ಆಗಮಿಸುವರು. ಅಧ್ಯಕ್ಷತೆಯನ್ನು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಮದುಸೂಧನ ಪುಣೇಕರ ವಹಿಸುವರು.

ಗದಗ ಉತ್ಸವ ಸಮಿತಿ ಚೇರಮನ್ ಚಂದ್ರು ಬಾಳಿಹಳ್ಳಿಮಠ ಉಪಸ್ಥಿತರಿರುವರು ಎಂದು ಪ್ರಚಾರ ಸಮಿತಿಯ ಜಯದೇವ ಮೆಣಸಗಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

**ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಗದಗ, ಜಿಲ್ಲೆ : ಗದಗ**

ದೂ : 08372-220644 ಇಮೇಲ್ : gadagddpi@gmail.com

ಸಂ/ಸಪ್ರಾಪ್ರೌಶಾಪೀಪೂ/ಟೆಂಡರ್ ಪ್ರಕಟಣೆ/2023-24ದಿನಾಂಕ: 11-09-2023

**ಟೆಂಡರ್ ಪ್ರಕಟಣೆ**

ಗದಗ ಜಿಲ್ಲೆಯ 27 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ (3 ಮತ್ತು 5 ಸೀಟರ್ ರಿವರ್ಸಿಬಲ್ ಡೆಸ್ಕ್) ಪೀಠೋಪಕರಣಗಳನ್ನು ಖರೀದಿ ಮಾಡಲು ಅರ್ಹ ಸಂಸ್ಥೆಗಳಿಂದ, ದ್ವಿ ಲಕೋಟಿ ಮಾದರಿಯಲ್ಲಿ ಇ-ಪ್ರೋಕ್ಯುರಮೆಂಟ ಮೂಲಕ DPI/2023-24/IND0047 ಟೆಂಡರ್ ಆಹ್ವಾನಿಸಿದೆ. ಟೆಂಡರ ಮೊತ್ತ ರೂ. **4405602.00** ಇರುತ್ತದೆ. ಸದರಿ ಟೆಂಡರ್‌ಗೆ ವಸ್ತು ನಿರ್ದಿಷ್ಠತೆ ಕುರಿತು Addendum ಸಲ್ಲಿಸಲಾಗಿದೆ, ಟೆಂಡರಗಳನ್ನು ದಿನಾಂಕ : **07-09-2023** ರಿಂದ ಸಲ್ಲಿಸಬಹುದಾಗಿದ್ದು, ಅಂತಿಮ ದಿನಾಂಕ : **16-09-2023** ಸಂಜೆ 5.00 ಗಂಟೆ ಇರುತ್ತದೆ. ಈ ಕುರಿತು ಅಂತರ್ಜಾಲ ತಾಣದ ವಿಳಾಸ http//www.kppp.karnataka.gov.in ನ ಮೂಲಕ ಟೆಂಡರ್ ಬುಕ್‌ಲೆಟ್‌ನ್ನು ಪಡೆಯಬಹುದಾಗಿದೆ.

**ಸಹಿ/- ಉಪನಿರ್ದೇಶಕರು(ಆ), ಶಾಲಾ ಶಿಕ್ಷಣ ಇಲಾಖೆ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/175/2023-24

# ಸಂಭ್ರಮದ ಹಾಲಗೊಂಡ ಬಸವೇಶ್ವರ ರಥೋತ್ಸವ

**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿಯ ಐತಿಹಾಸಿಕ ಹಾಲಗೊಂಡ ಬಸವೇಶ್ವರ ರಥೋತ್ಸವವು ಸಾವಿರಾರು ಭಕ್ತಾಧಿಗಳ ಮಧ್ಯೆ ಭಕ್ತ ಭಾವದಿಂದ ಸೋಮವಾರ ಸಂಜೆ ಜರುಗಿತು.

ಬಜಾರ ರಸ್ತೆಯ ಕೆಜಿಎಸ್ ಶಾಲೆಯಿಂದ ಆರಂಭಗೊಂಡು ವಿರುಪಾಕ್ಷೇಶ್ವರ ದೇವಸ್ಥಾನದವರೆಗೂ ರಥವು ಸಾಗಿತು. ಭಕ್ತಾಧಿಗಳು ಹರ ಹರ ಮಹಾದೇವ, ಬಸವೇಶ್ವರ ಮಹಾರಾಜ ಕೀ ಜೈ ಎಂದು ಘೋಷಣೆಗಳನ್ನು ಕೂಗುತ್ತಾ ತೇರಿಗೆ ಉತ್ತತ್ತಿಯನ್ನು ಎಸೆದರು. ರಥೋತ್ಸವದಲ್ಲಿ ಭಾಗವಹಿಸಿದ ಡೊಳ್ಳು ಕುಣಿತವು ಜನಮನ ಸೆಳೆಯಿತು.



ಇದಕ್ಕೂ ಪೂರ್ವ ಶೇಡದವರ ಮನೆಯಿಂದ ನೈವೇದ್ಯವನ್ನು ತಂದು ದೇವಸ್ಥಾನಕ್ಕೆ ತಲುಪಿಸಿದ ನಂತರ ತೇರನ್ನು ಐದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

# ಶ್ರೀ ಮೌನೇಶ್ವರ ಜಾತ್ರೆಯ ಕಡುಬಿನ ಕಾಳಗ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ತಾಲೂಕಿನ ವರವಿ ಕ್ಷೇತ್ರದ ಶ್ರೀ ಮೌನೇಶ್ವರರ ಜಾತ್ರಾ ಮಹೋತ್ಸವದ 2ನೇ ದಿನವಾದ ಮಂಗಳವಾರ ಶ್ರೀಮಠದ ಮೌನೇಶ್ವರ ಸ್ವಾಮೀಜಿ ಶ್ವೇತವರ್ಣದಿಂದ ಕಂಗೊಳಿಸುತ್ತಾ, ತಲೆಗೆ ಹಸಿರು ವಸ್ತ್ರವನ್ನು ಧರಿಸಿ ಅಶ್ವಾರೂಢರಾಗಿ ವಿಜೃಂಭಣೆಯಿಂದ ಕಡುಬಿನ ಕಾಳಗ ನೆರವೇರಿಸಿದರು.

ಸಂಜೆ 5.30ರ ಸುಮಾರಿಗೆ ಪ್ರಾರಂಭವಾದ ಕಡುಬಿನ ಕಾಳಗದ ಕಾರ್ಯಕ್ರಮವು ಸಂಪ್ರದಾಯದಂತೆ ಶ್ರೀಮಠದ ಆವರಣದ ಸುತ್ತಲೂ ಮೂರು ಸುತ್ತು ಹಾಗೂ ರಥದ ಬೀದಿಯಲ್ಲಿ ಎರಡು ಸುತ್ತು ಬೆಲ್ಲದ ಚೂರುಗಳನ್ನು ಶ್ರೀಗಳು ಎಸೆಯುವುದರ ಮೂಲಕ ನೆರವೇರಿಸಿದರು.

ಈ ಸಂದರ್ಭದಲ್ಲಿ ಭಕ್ತರು ಶ್ರೀಗಳು ಎಸೆಯುತ್ತಿದ್ದ ಬೆಲ್ಲದ ಚೂರುಗಳನ್ನು ನಾ ಮುಂದು, ತಾ ಮುಂದು ಎನ್ನುವಂತೆ ಪ್ರಸಾದದ ರೂಪದಲ್ಲಿ ಸ್ವೀಕರಿಸಿ ಮೌನೇಶ್ವರರ ಕೃಪೆಗೆ ಪಾತ್ರರಾದರು.

# ಇಂದು ಬೆಂಗಳೂರಿನಲ್ಲಿ ದಕ್ಷಿಣ ರಾಜ್ಯಗಳ ಡಿಜಿಪಿ ಸಮ್ಮೇಳನ: ಕರ್ನಾಟಕ ಆಯೋಜನೆ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಇಂದು ರಂದು ಬೆಂಗಳೂರಿನಲ್ಲಿ ಒಂದು ದಿನದ ದಕ್ಷಿಣ ರಾಜ್ಯಗಳ ಡಿಜಿಪಿ ಸಮಾವೇಶವನ್ನು ಆಯೋಜಿಸಲಾಗಿದೆ.

ಈ ಸಮಾವೇಶದಲ್ಲಿ ದಕ್ಷಿಣ ರಾಜ್ಯಗಳ ಎಲ್ಲಾ ಪೊಲೀಸ್ ಮಹಾನಿರ್ದೇಶಕರು ಹಾಗೂ ಕೇಂದ್ರ ಪೊಲೀಸ್ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಮಾವೇಶವು ದಕ್ಷಿಣ ಭಾರತದ ವಿವಿಧ ಪೊಲೀಸ್ ಪಡೆಗಳ ನಡುವಿನ ಪ್ರಾದೇಶಿಕ ಸಮನ್ವಯದಲ್ಲಿ ಪ್ರಮುಖ ಮೈಲಿಗಲ್ಲು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಗೃಹ ಸಚಿವ ಜಿ ಪರಮೇಶ್ವರ ಅವರ ಸಮ್ಮುಖದಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ದಕ್ಷಿಣ ಭಾರತ ಡಿಜಿಪಿಗಳ ಸಮನ್ವಯ ಸಮಾವೇಶ'ವನ್ನು ಉದ್ಘಾಟಿಸಲಿದ್ದಾರೆ. ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಮತ್ತು ಲಕ್ಷದ್ವೀಪ ದ್ವೀಪಗಳ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಪಡೆಗಳ ಮುಖ್ಯಸ್ಥರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

# ಯುವಕರು ಮೊಬೈಲ್ ಗೀಳು, ದುಶ್ಚಟಗಳಿಂದ ಹೊರಬನ್ನಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕೇಂದ್ರ ಮತ್ತು ರಾಜ್ಯ ಸರ್ಕಾರ ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ಅನುದಾನ ಒದಗಿಸುತ್ತಿದೆ. ಇಂದಿನ ಯುವ ಜನತೆ ಮೊಬೈಲ್ ಗೀಳು, ದುಶ್ಚಟಗಳಿಂದ ಹೊರಬಂದು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಉತ್ತಮ ಆರೋಗ್ಯ, ಸುಂದರ ಬದುಕು ಹೊಂದುವದರೊಂದಿಗೆ ಸಶಕ್ತ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು. ಅವರು ಸೋಮವಾರ ತಾಲೂಕಿನ ಮಾಡಳ್ಳಿ ಗ್ರಾಮದ ಎನ್.ಜಿ ಪಾಟೀಲ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ 2023-24ನೇ ಸಾಲಿನ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಕ್ರೀಡಾಕೂಟಗಳು ದೈಹಿಕ, ಮಾನಸಿಕ ಆರೋಗ್ಯದ ಜತೆಗೆ ಪರಸ್ಪರ ಸ್ನೇಹ, ಬಾಂಧವ್ಯ, ಭ್ರಾತೃತ್ವ, ನಾಯಕತ್ವ ಗುಣ ಬೆಳೆಸುತ್ತವೆ. ಈ ನಿಟ್ಟಿನಲ್ಲಿ ಸರ್ಕಾರ ಗ್ರಾಮೀಣ ಕ್ರೀಡಾಕೂಟಗಳನ್ನು ಸಂಘಟಿಸುವ ಮೂಲಕ ಗ್ರಾಮೀಣ ಪ್ರತಿಭೆಗಳನ್ನು ಬೆಳಕಿಗೆ ತರಲು ಪ್ರಯತ್ನಿಸುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಯುವಜನ ಮತ್ತು ಸಬಲೀಕರಣ ಇಲಾಖೆಯ ಅಧಿಕಾರಿ ಶರಣು ಗೋಗೇರಿ, ತಹಸೀಲ್ದಾರ್ ಕೆ.ಆನಂದ್ ಶೀಲ, ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಮ್ ಮುಂದಿನಮನಿ, ತಾ.ಪಂ ಮಾಜಿ ಸದಸ್ಯ ನಿಂಬಣ್ಣ ಮಡಿವಾಳರ, ತಾಲೂಕಾ ಯುವಜನ ಮತ್ತು ಸಬಲೀಕರಣ ಇಲಾಖೆಯ ಸಿ.ವೈ ಮೇಲಿನಮನಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಹುಲಿಗೆಪ್ಪ ಕರೆಣ್ಣವರ, ಜಿ.ವಿ ಪಾಟೀಲ, ಉಪಾಧ್ಯಕ್ಷರು, ಸರ್ವ ಸದಸ್ಯರು, ಶಿಕ್ಷಕರು, ಶಾಲೆಯ ಮುಖ್ಯೋಪಾಧ್ಯಾಯರು, ಕ್ರೀಡಾಪಟುಗಳು ಇದ್ದರು.

# ಚೆಕ್‌ಪೋಸ್ಟ್‌ಗಳಿಗೆ ಸಿಬ್ಬಂದಿಗಳನ್ನು ನೇಮಿಸಲು ಆಗ್ರಹ



**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸರ್ಕಾರದ ಅನುದಾನದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಜಿಲ್ಲೆಯಲ್ಲಿ ಹಲವೆಡೆ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಿದೆ. ಇದರ ಉದ್ದೇಶ, ಅಕ್ರಮ ಗಣಿ ಮತ್ತು ಮರಳು/ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸುವುದಾಗಿದೆ. ಪ್ರತಿಯೊಂದು ಚೆಕ್ ಪೋಸ್ಟನ್ನು ನಿರ್ಮಾಣ ಮಾಡಲು ಅಂದಾಜು 5 ಲಕ್ಷ ರೂ ವ್ಯಯಿಸಲಾಗಿದೆ. ಆದರೆ, ಸುಮಾರು ಮೂರು ವರ್ಷಗಳಿಂದ ಸರಿಯಾಗಿ ಸಿಬ್ಬಂದಿಗಳನ್ನೇ ನೇಮಕ ಮಾಡದೆ ಈ ಚೆಕ್ ಪೋಸ್ಟ್‌ಗಳು ಪಾಳು ಬಿದ್ದಿವೆ. ಲೂಟಿಕೋರರು ಯಾವುದೇ ಭಯವಿಲ್ಲದೆ ರಾಜಾರೋಷವಾಗಿ ಗಣಿಗಾರಿಕೆ ನಡೆಸುತ್ತಾರೆ.

ಕಾರಣ, ಸದರಿ ಚೆಕ್‌ಪೋಸ್ಟ್‌ಗಳಲ್ಲಿ ಸೂಕ್ತ ಸಿಬ್ಬಂದಿಗಳನ್ನು ನೇಮಕ ಮಾಡಲು ಮುಂದಾಗದಿದ್ದರೆ ಜಯ ಕರ್ನಾಟಕ ಜನಪರ ವೇದಿಕೆಯ ವತಿಯಿಂದ ಹೋರಾಟ ನಡೆಸಬೇಕಾಗುತ್ತದೆ ಎಂದು ವೇದಿಕೆಯ ರಾಜ್ಯ ಉಪಾಧ್ಯಕ್ಷ ಹಾಲಪ್ಪ ವರವಿ ಪತ್ರಿಕಾ ಹೇಳಿಕೆಯ ಮೂಲಕ ಎಚ್ಚರಿಸಿದ್ದಾರೆ.

## ಬಸ್‌ಗಾಗಿ ಕಾಯುವುದರಲ್ಲಿಯೇ ಹೆಚ್ಚಿನ ಸಮಯ ಕಳೆಯುತ್ತಿರುವ ವಿದ್ಯಾರ್ಥಿಗಳು

# ಇಲ್ಲಿ ಪ್ರತಿಭಟನೆಗಳು ನಿತ್ಯ ನೂತನ!





**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕಳೆದ ಮೂರು ತಿಂಗಳ ಹಿಂದೆ ಪ್ರಾರಂಭವಾಗಿರುವ ಸರಕಾರದ 'ಶಕ್ತಿ' ಯೋಜನೆಯಿಂದ ದಿನನಿತ್ಯ ಬಸ್‌ಗಳು ತುಂಬಿ ತುಳುಕುತ್ತಲೇ ಸಂಚರಿಸುತ್ತಿದ್ದು, ಇದರಿಂದ ಬಸ್‌ಗಳಲ್ಲಿ ಸ್ಥಳಾವಕಾಶ ಇಲ್ಲದೆ, ಸಮಯಕ್ಕೆ ಸರಿಯಾಗಿ ದೊರಕದೆ ನಿತ್ಯವೂ ಕಾಯುವುದರಲ್ಲೇ ಹೆಚ್ಚಿನ ಸಮಯ ಕಳೆಯುತ್ತ ನಿಲ್ಲುತ್ತಿರುವ ವಿದ್ಯಾರ್ಥಿಗಳ ಗೋಳು ಕೇಳುವವರಿಲ್ಲದಂತಾಗಿದೆ. ಇದೇ ಕಾರಣದಿಂದ ಮಂಗಳವಾರ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾದ ಘಟನೆಯೂ ನಡೆದಿದೆ.

ಪಟ್ಟಣದ ಬಸ್ ನಿಲ್ದಾಣದಲ್ಲಿ ನಿತ್ಯ ಒಂದಿಲ್ಲೊಂದು ಗೋಳು ಸಾಮಾನ್ಯ ಎನ್ನುವಂತೆ ಆಗಿದ್ದು, ಅದರಲ್ಲೂ ಮಹಿಳೆಯರು ಬಸ್‌ಗಾಗಿ ಮುಗಿ ಬೀಳುತ್ತಿರುವದರಿಂದ ವಯಸ್ಸಾದವರು, ಮಕ್ಕಳು ಬಸ್ ಏರಲು ಸಹ ಆಗದೆ ಅಸಹಾಯಕರಾಗಿ ನಿಲ್ಲುವಂತಾಗಿದೆ. ಮುಖ್ಯವಾಗಿ, ಶಾಲಾ-ಕಾಲೇಜು ವಿದ್ಯಾರ್ಥಿಗಳಂತೂ ನಿತ್ಯವೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದಿನನಿತ್ಯ ಒಂದಿಲ್ಲೊಂದು ಸರ್ಕಸ್ ಮಾಡುತ್ತಲೇ ಮನೆಯಿಂದ ಶಾಲೆಗೆ, ಪುನಃ ಶಾಲೆಯಿಂದ ಮನೆಗೆ ತಲುಪಬೇಕಾದ ಸಂದರ್ಭ ಎದುರಾಗುತ್ತಿದ್ದು, 'ಶಾಲೆಗೆ ರಜೆ ನೀಡಿದರೆ ಸಾಕಪ್ಪ' ಎನ್ನುವಂತಹ ಮನಸ್ಥಿತಿ ವಿದ್ಯಾರ್ಥಿಗಳಲ್ಲಿ ಮೂಡತೊಡಗಿದೆ.

ನಿತ್ಯ ವಿದ್ಯಾರ್ಥಿಗಳು ಬಸ್‌ಗಳಿಗಾಗಿ ಹೆಚ್ಚಿನ ಸಮಯ ಕಾಯುವುದರಲ್ಲೇ ವ್ಯರ್ಥವಾಗುತ್ತಿದ್ದು, ಇದರಿಂದ ಶಾಲೆಗಳಿಗೆ ವೇಳೆಗೆ ಸರಿಯಾಗಿ ಬರಲಾರದೆ ವಿದ್ಯಾಭ್ಯಾಸದಲ್ಲಿ ಹಿನ್ನಡೆ ಅನುಭವಿಸುವಂತಾಗಿದೆ. ಕಳೆದ 2 ದಿನಗಳ ಹಿಂದೆ ಪಟ್ಟಣದ ಬಸ್‌ನಿಲ್ದಾಣದಲ್ಲಿ ಮಹಿಳೆಯರು ದಿಢೀರ್ ಪ್ರತಿಭಟನೆ ನಡೆಸಿದ್ದರು. ಅದಕ್ಕೂ ಮೊದಲು ವಿದ್ಯಾರ್ಥಿಗಳ ಪ್ರತಿಭಟನೆ, ಸಾರ್ವಜನಿರ ಪ್ರತಿಭಟನೆಗಳಂತೂ ಇಲ್ಲಿನ ಬಸ್ ನಿಲ್ದಾಣದಲ್ಲಿ ನಿತ್ಯ ನೂತನ ಎನ್ನುವಂತಾಗಿದೆ.

ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಹಲವಾರು ಪುಣ್ಯಕ್ಷೇತ್ರಗಳಿಗೆ ತೆರಳುವ ಮಹಿಳೆಯರು ಗುಂಪುಗೂಡಿ ಬಸ್ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಕಳೆದ ಒಂದು ತಿಂಗಳಿಂದ ಬಸ್ ನಿಲ್ದಾಣ ಗಿಜಿಗುಡುತ್ತಿದ್ದು, ಲಕ್ಷ್ಮೇಶ್ವರ ಘಟಕದಲ್ಲಿ ಬಸ್‌ಗಳ ಕೊರತೆಯೂ ಇರುವುದರಿಂದ ಬೇಡಿಕೆಗೆ ತಕ್ಕಂತೆ ಬಸ್ ಸೌಲಭ್ಯ ಒದಗಿಸುವದು ಘಟಕಕ್ಕೆ ಕಷ್ಟಸಾಧ್ಯವಾಗಿದೆ. ಮಂಗಳವಾರ ವಿದ್ಯಾರ್ಥಿಗಳು ಬಸ್ ಬಿಡುವ ಬಗ್ಗೆ ಕೇಳಲು ಹೋದ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಗಿ, ಸಿಬ್ಬಂದಿಗಳು ಹಾಗೂ ಪ್ರಯಾಣಿಕರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ಸಮಯದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಮಾಂತೇಶ ಮಣಕವಾಡ ಆಗಮಿಸಿ, ಬಸ್ ಸೌಲಭ್ಯ ಸರಿಗೊಳಿಸದಿದ್ದಲ್ಲಿ ಎಬಿವಿಪಿಯಿಂದ ಮತ್ತೆ ಪ್ರತಿಭಟನೆ ನಡೆಸುವದಾಗಿ ಎಚ್ಚರಿಕೆ ನೀಡಿದರು.

> ಸ್ಥಳಕ್ಕೆ ಆಗಮಿಸಿದ ಪೊಲೀಸ್ ಇಲಾಖೆಯ ಎಎಸ್‌ಐ ಟಿ.ಕೆ ರಾಥೋಡ ಮತ್ತು ಸಿಬ್ಬಂದಿಗಳು ವಿದ್ಯಾರ್ಥಿಗಳು ಹಾಗೂ ಇತರ ಪ್ರಯಾಣಿಕರನ್ನು ಸಮಾಧಾನಪಡಿಸಿ, ನಿಯಂತ್ರಿಸಲು ಹರಸಾಹಸ ಪಡಬೇಕಾಯಿತು. ಶಕ್ತಿ ಯೋಜನೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗುತ್ತಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟರೆ, ಶಕ್ತಿ ಯೋಜನೆ ಜಾರಿಯಾಗಿದ್ದರಿಂದ ಮಹಿಳೆಯರಿಗೆ ಸಾಕಷ್ಟು ಅನೂಕೂಲವಾಗಿದೆ, ಇನ್ನಷ್ಟು ಹೆಚ್ಚು ಹೆಚ್ಚು ಬಸ್‌ಗಳನ್ನು ಒದಗಿಸುವದು ಅವಶ್ಯವಾಗಿದೆ ಎನ್ನುವದು ಮಹಿಳಾ ಪ್ರಯಾಣಿಕರ ಅಭಿಪ್ರಾಯವಾಗಿದೆ.

## ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಗೋವನಾಳ ಶಾಲೆಯಲ್ಲಿ ವಿನೂತನ ಕಾರ್ಯಕ್ರಮ

# ಶಾಲೆಗೆ ಮಕ್ಕಳನ್ನು ಸೆಳೆಯಲು 'ಶ್ರಾವಣ ಸಿರಿ-ಸಿಹಿ ಭೋಜನ'



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗ್ರಾಮೀಣ ಭಾಗದಲ್ಲಿ ಮಕ್ಕಳನ್ನು ಸರಕಾರಿ ಶಾಲೆಗಳತ್ತ ಆಕರ್ಷಿಸಲು ಪ್ರಸ್ತುತ ವರ್ಷದಿಂದ 'ಶ್ರಾವಣ ಸಿರಿ-ಸಿಹಿ ಭೋಜನ' ಎಂಬ ವಿನೂತನ ಕಾರ್ಯಕ್ರಮವನ್ನು ಲಕ್ಷ್ಮೇಶ್ವರ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗೋವನಾಳದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಶಾಲೆಯಲ್ಲಿ 1ನೇ ತರಗತಿಯಿಂದ 8ನೇ ತರಗತಿಯವರೆಗೂ 125 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಶ್ರಾವಣ ಮಾಸದ ನಾಗರ ಅಮಾವಾಸ್ಯೆಯಿಂದ ಬೆನಕನ ಅಮಾವಾಸ್ಯೆವರೆಗೂ ಪ್ರತಿದಿನ ವಿವಿಧ ರೀತಿಯ ಸಿಹಿ ಪದಾರ್ಥಗಳನ್ನು ಗ್ರಾಮದ ಹಿರಿಯ ದಾನಿಗಳಿಂದ, ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸದಸ್ಯರು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಿಂದ ಮತ್ತು ಶಾಲೆಯ ಎಸ್‌ಡಿಎಂಸಿ ಹಾಗೂ ಶಿಕ್ಷಕರ ವತಿಯಿಂದ ಪ್ರಧಾನ ಮಂತ್ರಿ ಪೋಷಣ ಅಭಿಯಾನದೊಂದಿಗೆ ಮಧ್ಯಾಹ್ನ ಊಟದ ಜೊತೆಗೆ ಜಿಲೇಬಿ, ಬೂಂದಿ, ಮೈಸೂರು ಪಾಕ್, ಶಾವಿಗೆ ಪಾಯಸ, ಕೇಸರಿಬಾತ್, ಬನ್ ಪಾಯಸ, ಶೇಂಗಾ ಹೋಳಿಗೆ, ಉಂಡೆ, ಗೋಧಿ ಹುಗ್ಗಿ ಇವುಗಳನ್ನು ಶ್ರಾವಣ ಮಾಸದ ಪ್ರತಿದಿನ ವಿದ್ಯಾರ್ಥಿಗಳಿಗೆ ವಿತರಿಸಲಾಗಿದ್ದು ಮಕ್ಕಳು ಖುಷಿಯಿಂದ ಭೋಜನ ಸವಿದರು.

ಈ ಕುರಿತು ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಮ್ ಮುಂದಿನಮನಿ, ಗುಣಮಟ್ಟದ ಶಿಕ್ಷಣಕ್ಕಾಗಿ ಪೈಪೋಟಿ ಇರುವುದರಿಂದ ಅನೇಕ ವಿದ್ಯಾರ್ಥಿಗಳು ಸರಕಾರಿ ಶಾಲೆಗಳಿಗೆ ಹೋಗುತ್ತಿಲ್ಲ. ಮಧ್ಯಾಹ್ನದ ಊಟದಲ್ಲಿ ಸಿಹಿ ತಿಂಡಿ ನೀಡುವುದು ಉತ್ತಮ ಕ್ರಮವಾಗಿದ್ದು, ಸಾರ್ವಜನಿಕರ ಸಹಭಾಗಿತ್ವದಲ್ಲಿ ಇತರ ಸರ್ಕಾರಿ ಶಾಲೆಗಳಲ್ಲಿಯೂ ಇದನ್ನು ಅಳವಡಿಸಿಕೊಳ್ಳಬೇಕು ಎಂದರು.

> ಇದೇ ರೀತಿ ತಾಲೂಕಿನ ಪುಬಡ್ನಿ ಕ್ಲಸ್ಟರಿನ ಸಕಿಪ್ರಾ ಶಾಲೆ ಸೋಗಿವಾಳ, ಸಕಿಪ್ರಾ ಶಾಲೆ ಹಿರೇಮಲ್ಲಾಪೂರ, ಸರ್ಕಾರಿ ಪ್ರೌಢಶಾಲೆ ಪು ಬಡ್ನಿ, ಲಕ್ಷ್ಮೇಶ್ವರ ಉತ್ತರ ಕ್ಲಸ್ಟರಿನ ಸ.ಪ್ರೌಢಶಾಲೆ ಹಾಗೂ ವಾರದ ವಿಶೇಷ ದಿನಗಳಲ್ಲಿ ಇತರ ಶಾಲೆಗಳೂ ಸಿಹಿ ಭೋಜನ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ತಾಲೂಕು ಅಕ್ಷರ ದಾಸೋಹ ಕಾರ್ಯಕ್ರಮದ ಸಹ ನಿರ್ದೇಶಕ ಎಚ್. ಎಸ್ ರಾಮನಗೌಡ ಸಂತಸ ವ್ಯಕ್ತಪಡಿಸಿದ್ದಾರೆ.



> ಶಾಲೆಯ ಪ್ರಧಾನ ಗುರುಗಳಾದ ಬಿ.ಬಿ ಯತ್ತಿನಹಳ್ಳಿ ಮಾತನಾಡಿ, ಸಾರ್ವಜನಿಕರೂ ಸೇರಿದಂತೆ ಸಮುದಾಯದವರ ಆರ್ಥಿಕ ನೆರವು, ವಿಶೇಷ ಪೌಷ್ಠಿಕ ಆಹಾರ ಪದಾರ್ಥಗಳ ಜೊತೆಗೆ ಅಮೃತದ ಸಿಹಿ ಭೋಜನದ ಹೊರತಾಗಿ ಉತ್ತಮ ಶಿಕ್ಷಣವನ್ನೂ ನೀಡುತ್ತಿದ್ದೇವೆ. ಈ ಮೂಲಕ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಹೆಚ್ಚಾಗಿ, ಹಾಜರಾತಿಯು ಸ್ಥಿರವಾಗಿರುತ್ತದೆ ಮತ್ತು ಸರ್ಕಾರಿ ಶಾಲೆಗಳ ಸಬಲೀಕರಣಗೊಳಿಸಲು ಸಾಧ್ಯ ಎಂದು ತಿಳಿಸಿದರು.

## 'ಗದಗ ಉತ್ಸವ'ದಲ್ಲಿ ಉದ್ಯಮಶೀಲತೆಯ ಕುರಿತ ಸಂವಾದದಲ್ಲಿ ಕವಿತಾ ಮಿಶ್ರಾ

# ಛಲವೊಂದಿದ್ದರೆ ಗೆಲುವು ನಿಶ್ಚಿತ




**■ವಿಜಯಸಾಕ್ಷಿ ಸುದ್ದಿ, ಗದಗ**

ಭೂಮಿತಾಯಿ ನಂಬಿದವರನ್ನು ಕೈ ಬಿಡುವುದಿಲ್ಲ. ಮಣ್ಣೆಂಬುದು ಅಪ್ಪಟ ಚಿನ್ನ. ಬೆವರು ಸುರಿಸಿ ಕೆಲಸ ಮಾಡಿದಲ್ಲಿ ಭೂಮಿತಾಯಿ ಪ್ರತಿಫಲ ನೀಡಬಲ್ಲಳು ಎಂದು ಕವಿತಾಳದ ಪ್ರಗತಿಪರ ರೈತ ಸಾಧಕಿ ಕವಿತಾ ಉಮಾಶಂಕರ ಮಿಶ್ರಾ ಅಭಿಪ್ರಾಯಪಟ್ಟರು.

ಅವರು ಸೋಮವಾರ ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ ಹಾಗೂ ಗದಗ ಜಿ.ಪಂ ಆಶ್ರಯದಲ್ಲಿ ನಡೆದ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟದ 'ಗದಗ ಉತ್ಸವ'ದಲ್ಲಿ ಮಹಿಳಾ ಘಟಕ ಏರ್ಪಡಿಸಿದ್ದ ಉದ್ಯಮಶೀಲತೆಯ ಕುರಿತ ಸಂವಾದವನ್ನು ಉದ್ಘಾಟಿಸಿ ಮಾತನಾಡಿದರು.

ಯುವಕರು, ಯುವತಿಯರು ಅದರಲ್ಲೂ ವಿಶೇಷವಾಗಿ ಕೃಷಿ ಅಧ್ಯಯನ ಮಾಡಿದವರು, ಇತರೆ ಉನ್ನತ ಪದವಿ ಹೊಂದಿದವರು ಕೃಷಿಯ ಬಗ್ಗೆಯೂ ಆಸಕ್ತಿ ಹೊಂದಬೇಕು. ಮಹಿಳೆಯರು ಛಲದಿಂದ ಸಾಧನೆಗೆ ಮುಂದಾದರೆ ಗೆಲವು ನಿಶ್ಚಿತ ಎಂಬುದನ್ನು ತಮ್ಮ ಜೀವನದ ಯಶೋಗಾಥೆಯ ಮೂಲಕ ಮನವರಿಕೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ತಾತನಗೌಡ ಪಾಟೀಲ ಮಾತನಾಡಿ, ಸಾಧಕ ಮಹಿಳೆ ಕವಿತಾ ಮಿಶ್ರಾ ನಮಗಿಂದು ಆದರ್ಶ ಮತ್ತು ಸ್ಫೂರ್ತಿಯಾಗಿದ್ದಾರೆ. ನಮ್ಮ ಮಹಿಳೆಯರೂ ಸಹ ಇದೇ ರೀತಿಯ ಸಾಧನೆ ಮಾಡಲಿ ಎಂದರಲ್ಲದೆ, ಚೇಂಬರ್ ಮುಂದಿನ ವರ್ಷದಿಂದ ಸಾಧಕ ಮಹಿಳೆಗೂ ಪ್ರಶಸ್ತಿ ನೀಡಿ ಗೌರವಿಸಬೇಕೆಂದರು.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಗದಗ ಪ್ರಾದೇಶಿಕ ಕಚೇರಿಯ ಪ್ರಬಂಧಕ ಪ್ರಕಾಶ ಎ, ಹುಲಕೋಟಿಯ ಗ್ರಾಮೀಣ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ಪಂಚಾಕ್ಷರಿ ಹೊಸಮನಿ, ಧಾರವಾಡ ಸಿಡಾಕ್ ಜಂಟಿ ನಿರ್ದೇಶಕ ಸಿ ಎಚ್ ಅಂಗಡಿ, ಗದಗ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಿವಪುತ್ರಪ್ಪ ಹರಿಜನ ಅವರು ಮಾತನಾಡಿ, ಉದ್ಯಮಶೀಲತೆಯ ಕುರಿತು ಸಂವಾದ ನಡೆಸಿದರು.

ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಮಧುಸೂದನ ಪುಣೇಕರ, ಗದಗ ಉತ್ಸವ ಚೇರಮನ್ ಚಂದ್ರು ಬಾಳಿಹಳ್ಳಿಮಠ ಮಾತನಾಡಿದರು. ವೇದಿಕೆಯ ಮೇಲೆ ಉಪಾಧ್ಯಕ್ಷರಾದ ಶೋಭಾ ಸಂಶಿಮಠ, ನೀಲಾಂಬಿಕಾ ತೋಟದ, ವೀಣಾ ಪೊತ್ನೀಸ್, ಗೌರವ ಕಾರ್ಯದರ್ಶಿ ಸುವರ್ಣಾ ಮದರಿಮಠ, ಪ್ರಭಾ ಗದಗ, ಸುರೇಖಾ ಮಲ್ಲಾಡದ, ಕೋಶಾಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ, ರಾಜಣ್ಣ ಗುಡಿಮನಿ, ಸದಾಶಿವಯ್ಯ ಮದರಿಮಠ ಉಪಸ್ಥಿತರಿದ್ದರು.

ಕ್ಷಿತಿ ಸುಲಾಖೆ ಪ್ರಾರ್ಥಿಸಿದರು. ನಂದಾ ಬಾಳಿಹಳ್ಳಿಮಠ ನಿರೂಪಿಸಿದರು. ಸುವರ್ಣಾ ಮದರಿಮಠ ವಂದಿಸಿದರು.

> ಹೆಣ್ಣು ಮಕ್ಕಳು ಸಾಧಿಸಬೇಕೆಂಬ ಛಲದ ಕಿಡಿ ಹೊತ್ತಿಸಿದ್ದೇ ಆದಲ್ಲಿ ಅವರು ಗುರಿ ತಲುಪುವವರೆಗೂ ಬಿಡಲಾರರು ಎಂಬುದನ್ನು ಇತಿಹಾಸದ ಪುಟಗಳಿಂದ ತಿಳಿದಿದ್ದೇವೆ. ಇಂದಿನ ದಿನಗಳಲ್ಲಿ ಮಹಿಳೆಯರು ಎಷ್ಟೇ ಶಿಕ್ಷಣ ಪಡೆದರೂ ಮದುವೆಯ ನಂತರ ಆಕೆ ಗೃಹಣಿಯಾಗಿ ಕುಟುಂಬಕ್ಕೆ ಸ್ಥಿಮಿತಗೊಳ್ಳುತ್ತಾಳೆ. ಇಲ್ಲವಾದರೆ ಯಾವುದೋ ಒಂದು ಉದ್ಯೋಗದಲ್ಲಿ ಅಲ್ಪ ಸಂಬಳಕ್ಕೆ ದುಡಿಯಬೇಕಾಗುತ್ತದೆ.
>
> **– ಕವಿತಾ ಉಮಾಶಂಕರ ಮಿಶ್ರಾ,**
> ಪ್ರಗತಿಪರ ರೈತ ಸಾಧಕಿ, ಕವಿತಾಳ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka